ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಉತ್ತರದಿಂದ ನಮಗೆ ಸಮಾಧಾನ ಆಗಿಲ್ಲ. ನಾನು ಕೇಳಿದಂಥ ಪ್ರಶ್ನೆಗೆ ಯಾವ ಉತ್ತರವೂ ಬರಲಿಲ್ಲ. ನಾಮಿನೇಷನ್‌ನಿಂದ ಇವರು ಫೋರ್ ಅನ್ಯಾಯ ಮಾಡುತ್ತಿದ್ದಾರೆ ಆದ್ದರಿಂದ ಇದನ್ನು ಪ್ರತಿಭಟಿಸಿ ನಾವು ವಾಕ್ ಔಟ್ ಮಾಡುತ್ತೇವೆ

(ಕಾಂಗ್ರೆ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಹೊರಗೆ ಕಾಲಿಟ್ಟು ಮತ್ತೆ ಎಲ್ಲರೂ ಬನ್ನಿ.

ಶ್ರೀ ರಾಮಕೃಷ್ಣ ಹೆಗಡೆ.—ಇಂಥ ನಾಟಕದಿಂದ ಜನರಿಗೆ ಏನೂ ಇಂಪ್ರೆಸ್ ಆಗುವುದಿಲ್ಲ.

MR. SPEAKER.—I will now put the motion to the vote of the House.

The question is that:

for the existing clause and proviso thereto, the following clause shall be substituted

> "(2) 'Backward Classes' means the Backward communities Backward Castes and Backward Tribes notified by the Government in Order No. DPAR 1 SRC 77, dated 4th March 1977 or in such other order as may be issued from time to time."

The motion is lost

The earlier proviso stands unaltered

ಖಾಸಗೀ ಸದಸ್ಯರ ನಿರ್ಣಯಗಳು

ಪಾನ ನಿರೋಧಕ್ಕೆ ಬದಲಿ ನೀತಿ ಹಾಗೂ ವ್ಯವಸ್ಥೆಯ ಬಗ್ಗೆ ಉನ್ನತ ಮಟ್ಟದ ಸಮಿತಿಯನ್ನು ನೇಮಿಸುವುದು.

ಅಧ್ಯಕ್ಷರು.—ಈಗ ಖಾಸಗೀ ಕಾರ್ಯಕಲಾಪಗಳು. ೧೯೮೬ನೇ ಫೆಬ್ರುವರಿ ೭ ರಂದು ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಮಂಡಿಸಿರುವ ಈ ಕೆಳಕಂಡ ನಿರ್ಣಯದ ಮೇಲೆ ಚರ್ಚೆ ಮುಂದುವರೆಸುವುದು

ನಿರ್ಣಯ.—

> "ಮದ್ಯಪಾನಕ್ಕೆ ಸಂಬಂಧಿಸಿದ ರಾಜ್ಯದಲ್ಲಿ ಪ್ರಸ್ತುತ ನೀತಿ ಹಾಗೂ ವ್ಯವಸ್ಥೆ ಶ್ರೀಸಾಮಾನ್ಯರ ಹಾಗೂ ಬಡಜನರ ಹಿತಕ್ಕೆ ಮಾರಕವಾಗಿ ಪರಿಣಮಿಸಿರುವುದರಿಂದ ಈಗಾಗಲೇ ನಡೆದಿರುವ ದುರಂತಗಳು, ಅವುಗಳ ಬಗ್ಗೆ ನೇಮಿಸಲ್ಪಟ್ಟ ವಿಚಾರಣಾ ಆಯೋಗಗಳ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಪಾನನಿರೋಧವೂ ಸೇರಿದಂತೆ ಬದಲಿ ನೀತಿ ಹಾಗೂ ವ್ಯವಸ್ಥೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ವಿಧಾನಮಂಡಲದ ಪ್ರತಿನಿಧಿಗಳನ್ನು ಒಳಗೊಂಡ ಒಂದು ಉನ್ನತಾಧಿಕಾರ ಸಮಿತಿಯನ್ನು ನೇಮಿಸಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.....

ಇದರ ಬಗ್ಗೆ ಯಾರಾದರೂ ಮಾತನಾಡಿ ಮಾನ್ಯ ಪ್ರಕಾಶ್ ಅವರೆ ಮಾತನಾಡಿ ಮಾನ್ಯ ತಂಗಳಿ ಅವರೆ, ನೀವು ಮಾತನಾಡುತ್ತೀರಾ ? ಮಾನ್ಯ ಶಾಣಪ್ಪನವರೆ, ನೀವು ಮಾತನಾಡುತ್ತೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಮಾತನಾಡುತ್ತೇವೆ ಎಂದಾಗ ಬೇಡ ಎಂದು ಹೇಳುತ್ತೀರಿ. ಈಗ ಎಲ್ಲರಿಗೂ ಮಾತನಾಡಿ ಎಂದು ಹೇಳುತ್ತಿದ್ದೀರಿ.

† ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಸಭಾಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಇಲ್ಲಿ ಮದ್ಯಪಾನ ನಿಷೇಧ ಕುರಿತಾದ ಅಂದರೆ :

"As the existing policy and set up in the State has resulted in Jeopardy to the interest of the common man, and Vulnerable sections of the people, this House resolved to constituted a High Power Committee inclusive of the Representatives of the Legislature to study, in the light of the liquor tragedies, and the recommendations of the Commissions of enquiry appointed in respect of them, and the Policy and set up existing in other States, and to recommend the feasibility of an alternative policy and set up including prohibition".

ಎನ್ನುವಂತಹ ಅತ್ಯಂತ ಮಹತ್ವವಾದ ಒಂದು ಖಾಸಗಿ ಮಸೂದೆಯನ್ನು ಈ ಸದನದ ಅವಗಾಹನೆಗಾಗಿ ಮತ್ತು ಚರ್ಚೆಗಾಗಿ ತೆಗೆದುಕೊಂಡು ಬಂದಿದ್ದಾರೆ ಆಂತಹ ಈ ಪಾನ ನಿಷೇಧದ ಬಗ್ಗೆ ನಮ್ಮ ಒಂದು ಪರಿಕಲ್ಪನೆಯನ್ನು ಯೋಚನೆ ಮಾಡುವುದಾದರೆ ಪ್ರಾಯಶಃ ಮನುಷ್ಯ ಬೇಸಾಯ ಸಂಸ್ಕೃತಿಗೆ ಒಳಪಟ್ಟು ತನ್ನ ನಾಗರೀಕವಾದ ನೆಲೆಗಳನ್ನು ನಿರ್ಮಾಣ ಮಾಡುವಂತಹ ಎಲ್ಲಾ ಸಂದರ್ಭಗಳಲ್ಲಿ, ಬದುಕಿನ ನೀರವತೆಯನ್ನು ತಂದುಕೊಂಡಾಗ, ಬದುಕು ಬಹಳ ಮಟ್ಟಿಗೆ ಮನುಷ್ಯನು ಮುಖ್ಯವಾಗಿ ದೈಹಿಕವಾಗಿ ಶ್ರಮಕ್ಕೆ ಒಳಪಡುವಂತಹ ಸಂದರ್ಭದಲ್ಲಿ ಬದುಕು ಒಂದು ಸವಾಲಾಗುವ ಪರಿಸ್ಥಿತಿ ಬಂದಿರತಕ್ಕ ಸಂದರ್ಭಗಳಲ್ಲಿ ಅವುಗಳನ್ನು ಪ್ರಶ್ನೆ ಮಾಡತಕ್ಕ ಮತ್ತು ಅವುಗಳಿಂದ ಪಲಾಯನಗೊಳ್ಳುವಂತಹ, ತಾತ್ಕಾಲಿಕವಾದ ಉಪಶಮನಗಳಿಗೆ ಒಳಗಾಗುವ ರೀತಿಯಲ್ಲಿ ಚಿಂತೆ ಮಾಡುವಂತಹ ಸಂದರ್ಭದಲ್ಲಿ, ಆ ನಾಗರಿಕವಾದ ಮನುಷ್ಯ ಇಂತಹ ಸವಾಲುಗಳಿಂದ ತಪ್ಪಿಸಿಕೊಳ್ಳುವಂತಹ ಕಾರಣಗಳಿಗಾಗಿ ಬೇರೆ ಬೇರೆ ಮನೋಧರ್ಮ ಕಾರ್ಯಕ್ರಮಗಳನ್ನು ಅವರು ಸೃಷ್ಟಿ ಮಾಡಿಕೊಂಡಿರತಕ್ಕಂಥದ್ದು ಇದೆ. ಆ ದೃಷ್ಟಿಕೋನದಿಂದಲೇ ಮದ್ಯಪಾನ ಕೂಡ ಅತ್ಯಂತ ಮುಖ್ಯವಾದ ಒಂದು ವಿಷಯ. ಮದ್ಯವನ್ನು ಕುಡಿಯುವುದರ ಮೂಲಕ ಎಲ್ಲಾ ಸಮಸ್ಯೆಗಳನ್ನು ಮರೆತು, ಕನಿಷ್ಟ ಒಂದು ೩-೪ ತಾಸುಗಳ ಕಾಲ ಈ ಜಂಜಾಟದಿಂದ, ಮತ್ತು ಸಮಸ್ಯೆಗಳಿಂದ ತಾತ್ಕಾಲಿಕವಾದ ಬಿಡುಗಡೆಯನ್ನು ಪಡೆಯುತ್ತಾನೆ ಎನ್ನುವಂತಹ ಒಂದು ವಿವೇಕಕ್ಕೆ ಮನುಷ್ಯ ಒಳಗಾಗುತ್ತಾನೆ. ಈ ಕಾರಣಕ್ಕಾಗಿ ನಾಗರೀಕ ಸಮಾಜದಲ್ಲಿ ಮದ್ಯಪಾನ ಮಾಡತಕ್ಕಂತಹ ಪರಿಪಾಠವನ್ನು, ಮನುಕುಲ ದಾರಿಯಲ್ಲಿ ನಡೆದು ಬಂದ ಒಂದು ಘಟ್ಟದಲ್ಲಿ ಇದು ಪ್ರಾರಂಭವಾಯಿತು. ನಮ್ಮ ಪುರಾಣಗಳಲ್ಲೂ ಕೂಡ ಅತ್ಯಂತ ಆದ್ಭುತವಾದ ಕಲ್ಪನೆಗಳನ್ನು ಅಜಮರದ ಬಗ್ಗೆ ಹೇಳುತ್ತಾರೆ. ಅಜಮರದ ಬಗ್ಗೆ ಹೇಳುವುದಾದರೆ ಅಜಮರ ಭೂಲೋಕಕ್ಕೆ ಬಂದಂತಹ ಸಂದರ್ಭದಲ್ಲಿ ಅಲ್ಲಿ ನರ್ತನ ಮಾಡತಕ್ಕ ಅನೇಕ ರಂಭೆ, ಊರ್ವಶಿ, ಕಿನ್ನರಿ ಕಂಪುರಿಗಳನ್ನು ನೋಡಿದಂತಹ ಸಂದರ್ಭದಲ್ಲಿ ಅವನು ಈ ವಿಷಯದ ಬಗ್ಗೆ ಮನಸ್ಸಿಟ್ಟು ಪ್ರಸ್ತಾಪ ಮಾಡುತ್ತಾನೆ. ಇಷ್ಟೊಂದು ಸುಂದರವಾಗಿರತಕ್ಕ ವಾತಾವರಣದಲ್ಲಿ ಬದುಕಿನ ಎಲ್ಲಾ ಜಂಜಾಟವನ್ನು ಮರೆತು ಈ ರೀತಿಯಾಗಿ ಆನಂದದಿಂದಿರತಕ್ಕಂತಹದ್ದನ್ನು ನೋಡಿದಾಗ ಸ್ವರ್ಗಲೋಕವಾಸಿಯಾದ ನನಗೂ ಕೂಡ ನಿಮ್ಮ ಬಗ್ಗೆ ಅಸೂಯೆಯಾಯಿತು ಎನ್ನುವಂತಹ ಮಾತನ್ನು ಅಜಮರ ಹೇಳಿದಾಗ ಅಲ್ಲಿ ಗಾಂಜಾ ತೋಟದ ಹೂಲಗಳಲ್ಲಿ ಅವರೆಲ್ಲರೂ ನರ್ತನ ಮಾಡುತ್ತಿರುತ್ತಾರೆ. ಆಗ ಈ ಗಾಂಜಾ ಸೇವನೆಯನ್ನು ಮಾಡುವುದರ ಮುಖಾಂತರ ಅಜರ ಸ್ವರ್ಗಕ್ಕೆ ಹೋಗುವುದನ್ನೇ ಮರೆತು ಇಲ್ಲಿ ಉಳಿದದ್ದು ಪುರಾಣ ಕಲ್ಪನೆ ಕೂಡ ನಮಗೆ ಇರುವುದರಿಂದ, ಇತ್ತೀಚೆಗೆ ಬೇರೆ ಬೇರೆ ಮಾಧಕ ವಸ್ತುಗಳ ಚಟಕ್ಕೆ ಮನುಷ್ಯ ಒಳಗಾಗಿರತಕ್ಕ, ಜನಗಳಿಗೆ ಗಾಂಜಾವನ್ನು ಯಾವ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕೆಂಬುದು ಗೊತ್ತಿರುವುದಿಲ್ಲ. ಶಿವನಿಗೆ ಗಾಂಜಾ ಸೇವನೆಯನ್ನು ಮಾಡಿಸುವುದರ ಮೂಲಕವಾಗಿ ಶಿವನನ್ನೂ ಕೂಡ ನಾವು ಸಮತೋಲನದಿಂದ ತಪ್ಪಿಸುತ್ತೇವೆ ಎನ್ನುವಂತಹ

---

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಒಂದು ಪುರಾಣದ ಕಲ್ಪನೆ ಕೂಡ ಬರುತ್ತದೆ. ಆದ್ದರಿಂದ ನಾವು ಶಿವರಾತ್ರಿಯ ಸಂದರ್ಭದಲ್ಲಿ ಅನೇಕ ಸಂದರ್ಭಗಳಲ್ಲಿ ಉತ್ತರ ಭಾರತದಲ್ಲಿ ಶಿವನನ್ನು ಮೆಚ್ಚಿಸಬೇಕಾಗಿರುವಂತಹ ಸಂದರ್ಭಗಳಲ್ಲಿ ಎಲ್ಲಾ ಎಡೆಗಳಿಗಿಂತ ಹೆಚ್ಚಾಗಿ ಮದ್ಯಪಾನ ಸೇವನೆಯನ್ನು ಮಾಡುವಂತಹ ಒಂದು ವ್ಯವಸ್ಥೆ ಅಲ್ಲಿದೆ, ಮತ್ತೆ ಅವರು ಮಾಡಿರತಕ್ಕಂತಹದ್ದು. ಮೂಲದಲ್ಲಿ ಮನುಷ್ಯನ ಕ್ರಿಯೆಯನ್ನು ತಾವು ಯೋಚನೆ ಮಾಡಬೇಕು. ಯಾವುದಾದರೊಂದು ಸಮಸ್ಯೆಯಿಂದ ಪಾಲಾಯನವನ್ನು ಪಡೆಯಬೇಕು ಎನ್ನುವಂತಹ ಸದವಕಾಶ ಅವನಲ್ಲಿರುವಂತಹ ಸಂದರ್ಭದಲ್ಲಿ ಬ್ರಹ್ಮಾತ್ಮಕವಾಗಿರತಕ್ಕ ಸವಾಸ್ಕೆಗಳಿಗೆ ಆತ ಒಳಗಾಗುತ್ತಾನೆ. ಬ್ರಹ್ಮಾತ್ಕಾರವಾರ ಪುರಾಣಗಳಲ್ಲಿ ಅವನು ಆಧ್ಯಾತ್ಮಿಕ ಮೂಲಕವಾಗಿ ಅಲ್ಲಿರುವ ಎಲ್ಲಾ ಪ್ರಪಂಚವನ್ನು ನೆನೆಸುವಂತಹ ರೀತಿಯಲ್ಲಿ ಯೋಚನೆ ಮಾಡಬಹುದು. ಅಥವಾ ತಾತ್ಕಾಲಿಕವಾಗಿ ಮದ್ಯಪಾನವನ್ನು ಮಾಡುವುದರ ಮೂಲಕವಾಗಿ ಅವನು ತನ್ನ ಎಲ್ಲಾ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳತಕ್ಕ ಪ್ರಯತ್ನವನ್ನು ಮಾಡಬಹುದು. ಗಾಂಜಾ, ಅಫೀಮು ಈ ರೀತಿಯ ಕೆಲವು ಮಾದಕ ವಸ್ತುಗಳನ್ನ ಸೇವನೆ ಮಾಡುವುದರ ಮೂಲಕವಾಗಿ ತನ್ನ ದೈಹಿಕ, ಮಾನಸಿಕ ಶೋಭೆಯಿಂದ ಪಾರಾಗುವ ಪ್ರಯತ್ನವನ್ನು ಅವನು ಮಾಡಬಹುದು. ಬದುಕು ಮತ್ತು ಸಮಾಜದಲ್ಲಿ ಹೆಚ್ಚು ಹೆಚ್ಚು ವಿಶಾಲವಾಗಿ ಹೋಗುವಂತಹ ಸಂದರ್ಭದಲ್ಲಿ ಇಂತಹ ಜಂಜಾಟಗಳಿಗೆ ಒಳಗಾಗತಕ್ಕ ಸಂದರ್ಭಗಳೂ ಇವೆ. ಆದರಿಂದ ಪಾಲಾಯನವಾಗತಕ್ಕ ಮತ್ತೊಂದು ವ್ಯವಸ್ಥೆ ಕೂಡ ಇದೆ. ಪ್ರಾಯಶಃ ಅವುಗಳಿಂದ ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಮನುಷ್ಯ ಮಾಡಬಹುದು. ಈ ಮದ್ಯಪಾನ ಕುರಿತಾಗಿ ಕೌಟಿಲ್ಯ ತನ್ನ ಅರ್ಥ ಶಾಸ್ತ್ರದಲ್ಲೂ ಈ ಮಾತನ್ನು ಹೇಳುತ್ತಾನೆ. ಅದು ಏನೆಂದರೆ, ಈ ಮದ್ಯಪಾನವನ್ನು ಮಾಡುವಂತಹ ಸಂದರ್ಭದಲ್ಲಿ ಅದಕ್ಕೆ ತೆರಿಗೆಯನ್ನು ಹಾಕಬೇಕು ಎನ್ನುವಂಥದ್ದನ್ನು ಹೇಳಿ ನಿಯಾವಳಿಗಳಲ್ಲೂ ಕೂಡ ಅದನ್ನು ಸೃಷ್ಟಿ ಮಾಡುತ್ತಾನೆ. ಮದ್ಯಪಾನವನ್ನು ತೆಗೆದುಕೊಂಡಿರತಕ್ಕಂತಹದ್ದು ಹೊಸದಾದ ಕಾರ್ಯಕ್ರಮ ಏನಲ್ಲ. ಅದೇ ರೀತಿಯಾಗಿ ಮದ್ಯಪಾನವನ್ನು ನಿಷೇಧ ಮಾಡಬೇಕೆಂದು ೧೯೨೦ರ ಸಂವಾರಿನಲ್ಲಿ ಅಮೇರಿಕಾ ದೇಶದಲ್ಲೂ ಕೂಡ ಇಂತಹ ಪ್ರಯತ್ನ ಆಗಿದ್ದು ಇದೆ. ಆ ಪ್ರಯತ್ನ ಆಗಿರತಕ್ಕ ಸಂದರ್ಭದಲ್ಲಿ ಇಟಲಿ ಮಂತ್ರಿ ಸಿಸಿಲಿ ಕಡೆ ವಲಸೆ ಹೋಗಿರತಕ್ಕ ಜನರು ಅಲ್ಲಿ ಒಂದು ಮಾಫಿಯ ಎನ್ನತಕ್ಕ ಗುಂಪನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ಅವರನ್ನು ಬೂಟ್ ಲೆಗ್ಗರ್ಸ್ ಎಂದು ಕರೆಯುತ್ತಾರೆ. ಅನೇಕ ಸಂದರ್ಭದಲ್ಲಿ ಇಂತಹ ಮಾದಕ ಪೇಯಗಳನ್ನು ನಿರ್ಮೂಲನ ಮಾಡುವುದರ ಮೂಲಕವಾಗಿ ಇಡೀ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡತಕ್ಕ ಪರಿಸ್ಥಿತಿ ಬರುತ್ತದೆ. ಆ ಸಂದರ್ಭವನ್ನು ಕೂಡಾ ನೆನಪಿಟ್ಟುಕೊಂಡಾಗ ಮಹಾತ್ಮ ಗಾಂಧೀಜಿಯವರು ಪ್ರಾಯಶಃ ಅವರು ಯೋಚನೆ ಮಾಡಿದರು, ಈ ಮದ್ಯಪಾನದ ಚಟಕ್ಕೆ ದಾಸನಾಗಿರತಕ್ಕ ಒಬ್ಬ ಮನುಷ್ಯ ಯಾವುದೇ ಸೃಜನಾತ್ಮಕವಾಗಿರತಕ್ಕ ಚಟುವಟಿಕೆಯಲ್ಲಿ ನಿರತನಾಗಿರುವುದಕ್ಕೆ ಸಾಧ್ಯತೆಯಿಲ್ಲ, ಇಡೀ ಬದುಕನ್ನು ಅದು ಕುಂಠಿತಗೊಳಿಸುತ್ತದೆ ಎಂದು. ಆ ಕಾರಣಕ್ಕಾಗಿ ಮದ್ಯಪಾನದ ಅಥವಾ ಇಂತಹ ಕೃತಕವಾಗಿರತಕ್ಕ ಜೀವನ ಪಲಾಯನ ವಿರೋಧಿಗಳಾಗಿರತಕ್ಕ ಕೆಲವು ಚಟಗಳಿಗೆ ಮನುಷ್ಯ ದಾಸನಾಗಬಾರದು ಎನ್ನುವ ಕಾರಣಗಳಿಗಾಗಿ ಈ ಮದ್ಯಪಾನ ನಿಷೇಧವನ್ನು ತರಬೇಕೆನ್ನುವ ಪ್ರಯತ್ನ ಅದು ಪ್ರಾರಂಭವಾದ ದಿನದಿಂದಲೂ ಕೂಡಾ ಚಿಂತನೆಗೆ ಒಳಗಾಗಿರತಕ್ಕ ಪ್ರತಿ ಮನುಷ್ಯ ಕೂಡಾ ಯೋಚನೆ ಮಾಡಿದ್ದಾನೆ. ಆ ಕಾರಣಕ್ಕಾಗಿ ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಶ್ರೀನಿವಾಸ್ ಅವರು ತಂದಿರತಕ್ಕ ಈ ಗೊತ್ತುವಳಿ ಪ್ರಾಯಶಃ ಅತ್ಯಂತ ಮುಖ್ಯವಾದ ಗೊತ್ತುವಳಿ. ಇದರಲ್ಲಿ ಬೇರೆ ಒಂದು ಆರ್ಥಿಕ ಆಯಾಮವನ್ನು ತಾವು ಗುರುತಿಸಬೇಕಾಗಿದ್ದರೆ ಯಾವುದೇ ಒಂದು ಬಂಡವಾಳಶಾಹೀ ವ್ಯವಸ್ಥೆಗೆ ಒಳಪಟ್ಟಿರತಕ್ಕ ಸಮಾಜ, ದುಡಿಯುವಂತಹ ಜನಗಳನ್ನು, ತಮ್ಮ ದುಡಿಮೆಯ ಗಳಿಕೆಯಲ್ಲಿ ಉಳಿತಾಯವನ್ನು ಮಾಡಿಕೊಳ್ಳಬಾರದು ಎಂಬ ಕಾರಣಗಳಿಗಾಗಿಯೂ ಅಲ್ಲಿರುವ ಸಮಸ್ಯೆಗಳಿಗೆ ನೇರವಾಗಿರತಕ್ಕ ಉತ್ತರ ಮತ್ತು ಪ್ರತಿಭಟನೆಯನ್ನು ಮಾಡಬಾರದು ಎನ್ನುವ ಕಾರಣಗಳಿಗಾಗಿ ಇವರಿಗೆ ಪಲಾಯನವಾದಿ ಕ್ರಮಗಳನ್ನು ತಂದುಕೊಡುತ್ತಾರೆ, ಈ ರೀತಿಯಾಗಿ ಅನೇಕ ಸಂದರ್ಭದಲ್ಲಿ ಸಮ್ಮ ಐತಿಹಾಸಿಕ ನಿಲುವುಗಳ ಒಂದು ಘಟ್ಟದಲ್ಲಿ ಧರ್ಮವೂ ಇಂತಹ ಅಸೀಮವಾದ ಕೆಲಸವನ್ನು ಮಾಡಿತು. ಕಾರ್ಲ್ ಮಾರ್ಕ್ಸ್ ಅವರು ಆ ವಿಚಾರವನ್ನು ಪ್ರಸ್ತಾಪ ಮಾಡುವಾಗ ಧರ್ಮ ಅಸೀಮವಾದ ಕೆಲಸವನ್ನು ಮಾಡುತ್ತದೆ ಎಂದಾಗ ಮನುಷ್ಯ ತಾನು ಪ್ರತಿಭಟನೆ ಮಾಡಬೇಕು ಎನ್ನುವ ಎಲ್ಲಾ ಕ್ರಿಯೆಗಳಿಗೂ ಅದು ತಣ್ಣೀರು ಎರಚುವ ಪ್ರಯತ್ನ ಮಾಡಿ ಅಲ್ಲಿರುವಂತಹ ಉಳಿಗಮಾನ

ವ್ಯವಸ್ಥೆ ಆಗಿರಬಹುದು ಅಥವಾ ಅಲ್ಲಿರತಕ್ಕ ವ್ಯವಸ್ಥೆಯನ್ನು ಆದೇ ಕಾರಣದಿಂದ ಉಳಿಸಿಕೊಂಡು ಹೋಗಬೇಕು ಎನ್ನುವ ವಿಶಿಷ್ಟ ಹಿತಾಸಕ್ತಿಗಳು ಏನಿವೆ ಆ ಹಿತಾಸಕ್ತಿಗಳನ್ನು ಪೋಷಿಸುವ ರೀತಿಯಲ್ಲಿ ಒಂದು ಸಂದರ್ಭದಲ್ಲಿ ಧರ್ಮ ಆ ಕೆಲಸವನ್ನು ಮಾಡಿದರೆ ಮತ್ತೊಂದು ಸಂದರ್ಭದಲ್ಲಿ ಸಮಾಜ ಒಪ್ಪದೇ ಇರುವಂತಹ ನೀತಿ ಬಾಹಿರವಾಗಿರತಕ್ಕ ಅನೇಕ ವಿಚಾರಗಳು, ಚಟುವಟಿಕೆಗಳು ಕೂಡಾ ನಡೆಯುತ್ತವೆ. ಇಲ್ಲಿ ಮದ್ಯಪಾನವನ್ನು ಮಾಡುವುದಕ್ಕಾಗಿ ಮನುಷ್ಯ ನೀತಿಬಾಹಿರ ಆಗುತ್ತಾನೆ ಎನ್ನುವ ಮಾತಲ್ಲ. ನೀತಿ ಎನ್ನುವಂತಹದ್ದು ಕೂಡಾ ಒಂದು ಸಾಪೇಕ್ಷವಾಗಿರತಕ್ಕ ಶಬ್ದ. ಈ ಶಬ್ದವನ್ನು ಸಮಾಜ ತನ್ನ ಇತಿಮಿತಿಗಳಲ್ಲಿ ಆ ಸಂದರ್ಭಗಳಲ್ಲಿ ಆದರ ಒತ್ತುಗಳಲ್ಲಿರುವಂತಹ ವ್ಯಾಖ್ಯಾನವನ್ನು ಮಾಡುವಂತಹದ್ದು ಇದೆ. ನೀತಿಯಂ ಕಾರಣಕ್ಕಾಗಿ ಮನುಷ್ಯ ಕುಡಿಯಬಾರದು ಎನ್ನುವ ಮಾತನ್ನು ಹೇಳುವುದಾದರೆ ಅದಕ್ಕೆ ನನ್ನ ವಿರೋಧ ಇದೆ ಅಧ್ಯಕ್ಷರೇ. ಇಲ್ಲಿ ನೀತಿ ಅನೀತಿ ಪ್ರಶ್ನೆ ಎನ್ನತಕ್ಕದಲ್ಲ. ಆದರೆ ವಿಶಿಷ್ಟ ಹಿತಾಸಕ್ತಿಗಳನ್ನು ಕಾಪಾಡಿಕೊಂಡು ಹೋಗುವ ಸಮಾಜ ದುಡಿಯುವ ಒಂದು ವರ್ಗವನ್ನು ಸದಾ ಕೃತಕವಾಗಿರತಕ್ಕ ಅಮಲಿನಲ್ಲಿ ಎತ್ತುವುದರ ಮೂಲಕವಾಗಿ ಅವನು ತನ್ನದೇ ಆಗಿರತಕ್ಕ ಮಾನವೀಯ ಭಾವನೆಗಳಿಗೆ ಅಭಿವ್ಯಕ್ತಿಯ ಸ್ಥಾನವನ್ನು ಕೊಡಲಾರದ ವ್ಯವಸ್ಥೆಯನ್ನು ಅದು ಮಾಡುತ್ತದೆ. ಈ ದೇಶದಲ್ಲಿ ಪ್ರತಿಭಟನೆ ಬರಬೇಕಾಗಿರತಕ್ಕ ಸಂದರ್ಭದಲ್ಲಿ ಆಗುವಂಥ ಭ್ರಷ್ಟಾಚಾರ ಮತ್ತು ನಡೆಯತಕ್ಕ ಎಲ್ಲಾ ವಿಚಾರಗಳ ಬಗ್ಗೆ ಅವರ ಅಭಿಪ್ರಾಯವನ್ನು ವ್ಯಕ್ತ ಮಾಡುವ ಸಂದರ್ಭದಲ್ಲಿ ಅವನು ಅವಲಿನಲ್ಲಿ ತೊಡಗುವಂತಹ ರೀತಿಯಲ್ಲಿ ಯೋಚನೆ ಮಾಡುವ ಕಾರಣಕ್ಕಾಗಿಯೇ ಮದ್ಯಪಾನ ಮೊದಲಾದ ಅನೇಕ ದುಶ್ಚಟಗಳಿಗೆ ಮನುಷ್ಯನನ್ನು ಗುಲಾಮನನ್ನಾಗಿ ಮಾಡುತ್ತಾನೆ. ಇಲ್ಲಿ ಹಿರಿಯರಾಗಿರತಕ್ಕವರೂ, ಶ್ರೀಮಂತ ವರ್ಗದಿಂದ ಬಂದಿರತಕ್ಕಂತಹವರು ಖುಷಿಗಾಗಿಯೋ ಅಥವಾ ಇನ್ನಾವುದೋ ಕಾರಣಕ್ಕಾಗಿ ಕುಡಿಯತಕ್ಕ ಜನರ ಬಗ್ಗೆ ನಮ್ಮ ಚರ್ಚೆಯಿಲ್ಲ. ಅಥವಾ ಕುಡಿದಂಥವನು ಮಹಾಪಾಪಿ ಎನ್ನುವ ದೃಷ್ಟಿ ಅಲ್ಲ. ಪಾಪಪುಣ್ಯ ಎನ್ನತಕ್ಕ ಪರಿಕಲ್ಪನೆಗಳೂ ಕೂಡಾ ಮನುಷ್ಯ ನಿರ್ಮಾಣ ಮಾಡಿರತಕ್ಕ ಸಾಪೇಕ್ಷ ಪರಿಕಲ್ಪನೆಗಳು, ಆದುದರಿಂದ ಅಲಮಪ್ರಭು ಒಂದು ಕಡೆ ಹೇಳುತ್ತಾನೆ, '' ಪಾಪ ಪುಣ್ಯದ ಹಂಗಿಲ್ಲದನಕ್ಕ ಯಮನ ಬಾಧೆಯಿಲ್ಲ '' ಎಂಬ ಮಾತನ್ನು ಹೇಳುತ್ತಾನೆ. ಪಾಪವೂ ಇಲ್ಲ, ಪುಣ್ಯವೂ ಇಲ್ಲ. ಆ ಕಾರಣಕ್ಕಾಗಿ ನಾನು ಯಮನಿಗೆ ಹೆದರಬೇಕಾದ ಕಾರಣ ಇಲ್ಲ ಎಂದು ಹೇಳುತ್ತಾನೆ. ಕುಡಿಯತಕ್ಕ ವ್ಯಕ್ತಿ ಇದು ಒಂದು ಅನೀತಿಯುತವಾಗಿರತಕ್ಕ ಕೆಲಸ ಎಂದು ಹೇಳಿ ಅವನು ಹೆದರ ಬೇಕಾಗಿಲ್ಲ. ಹೆದರತಕ್ಕದ್ದು ಇಲ್ಲ. ಸ್ವರ್ಗ ಅಥವಾ ನರಕ ಎನ್ನುವ ಒಂದು ಭಯವನ್ನು ಅವನಲ್ಲಿ ಹುಟ್ಟಿಸಬೇಕಾಗಿಲ್ಲ. ಆದರೆ ಇಲ್ಲಿ ತಂದಿರತಕ್ಕ ಉದ್ದೇಶ ಶ್ರೀಮಾನ್ ಶ್ರೀನಿವಾಸ್‌ರವರು, ಮದ್ಯಪಾನ ನಿಷೇಧವನ್ನು ಮಾಡಿರತಕ್ಕದ್ದು ನಿರರ್ಥಕ ಪ್ರಯತ್ನವಾಗಿದೆ, ಈ ನಿರರ್ಥಕ ಈ ಪ್ರಯತ್ನವನ್ನು ಮರೆತು ಮತ್ತೆ ಮದ್ಯಪಾನವನ್ನು ಮಾಡಬೇಕೂ ಎಂಬ ಪ್ರಯತ್ನ ತದನಂತರ ಇತ್ತೀಚಿನ ದಿನಗಳಲ್ಲಿ ಹೆಚ್ಚು ಅಂಗಡಿಗಳು ವ್ಯಾಪಕವಾಗಿ ಆಗಿರತಕ್ಕಂತಹದ್ದು ಎಲ್ಲಾ ಕಡೆಗೂ ಇಂತಹ ಮದ್ಯಪಾನಗಳನ್ನು ಮಾಡತಕ್ಕಂತಹ, ಅಂಗಡಿಗಳನ್ನು ತೆಗೆದಿರತಕ್ಕದ್ದು, ಶ್ರಮಜೀವಿಗಳು ತನ್ನ ಎಲ್ಲಾ ದುಡಿಮೆಯ, ಗಳಿಕೆಯ ಎಲ್ಲಾ ವಿಚಾರಗಳನ್ನು ಬರೀ ಮದ್ಯಪಾನಕ್ಕೆ ಕೊಡತಕ್ಕದ್ದು. ಇದರಿಂದ ಕಾನೂನು ಬಾಹಿರ ವಾಗಿರತಕ್ಕ ಅನೇಕ ಚಟುವಟಿಕೆಗಳು, ನೇರವಾಗಿ ಯಾವುದೋ ಹೆಣ್ಣುಮಗಳ ಮೇಲೆ ಆಗಿರತಕ್ಕ ಅತ್ಯಾಚಾರ ಆಗಬಹುದು, ಕೊಲೆ ಸುಲಿಗೆಗಳು ಆಗಿರಬಹುದು, ದರೋಡೆಗಳು ಆಗಿರಬಹುದು ಅಥವಾ ನೇರವಾಗಿ ಇದಕ್ಕೆ ಸಂಬಂಧ ಇಲ್ಲದಿದ್ದರೂ ಕೂಡಾ ಅದು ಒಂದು ಸಾಮಾಜಿಕ ಪಿಡುಗು ಆಗಿರುವುದರಿಂದ ಆ ಪಿಡುಗಿನ ಆಂತಿಮವಾಗಿರತಕ್ಕ ತಾರ್ಕಿಕ ಒಂದು ನಿಲುವು ಅಲ್ಲಿ ಬರಂತ್ತದೆ, ತಾರ್ಕಿಕವಾಗಿ, ಲಾಜಿಕಲ್ಲಾಗಿ ಏನು ಕರೆಯುತ್ತೇವೆ. ಜೂಜುಕಾರನಾಗಿರತಕ್ಕದ್ದು ಒಂದು ಕಡೆಗೆ ಇದ್ದರೆ, ಆ ಜೂಜಿನಲ್ಲಿ ಸೇರತಕ್ಕ ಹೆಚ್ಚು ವ್ಯಕ್ತಿಗಳು ಅಲ್ಲಿ ಇರುವುದಾಗಿದೆ. ಅಲ್ಲಿ ಪಕ್ಕದಲ್ಲಿ ಕಳವು ಆಗುತ್ತದೆ ಎನ್ನುವಂತಹದ್ದು ಅನಿವಾರ್ಯವಾಗಿರತಕ್ಕಂತಹ ಸತ್ಯ ಕೂಡಾ.

ಅದೇ ರೀತಿಯಾಗಿ ಈಗ ಮನುಷ್ಯ ಯಾವುದೋ ಪ್ರಯತ್ನದಲ್ಲಿ ಇರುತ್ತಾನೆ. ಆತ ಜಂಜಾಟದಿಂದ ತಪ್ಪಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾನೆ. ತಮಿಳುನಾಡಿನಲ್ಲಿ ಮದ್ಯಪಾನ ನಿಷೇಧ ಮಾಡಿದ ಸಂದರ್ಭದಲ್ಲಿ ಸಿನಿಮಾಗಳಿಗೆ ಹೋಗತಕ್ಕ ಪ್ರೇಕ್ಷಕರ ಸಂಖ್ಯೆ ಹೆಚ್ಚಾಯಿತು ಎನ್ನುವ ವಾದ ಬರುತ್ತದೆ ಮೂರು ತಾಸುಗಳ ಆ ಕತ್ತಲೆಯ ಲೋಕಕ್ಕೆ ಯಾರನ್ನು ನಾಯಕನನ್ನಾಗಿ ಮಾಡಿಕೊಳ್ಳಬೇಕು, ಯಾವರೀತಿಯಾಗಿ ತನ್ನ ಜಂಜಾಟಗಳಿಗೆ ಬಲಿಯಾಗಿದ್ದರೂ ಒಂದು ರೀತಿಯಾಗಿ ಅಲ್ಲೊಬ್ಬ ಪ್ರೇಕ್ಷಕನಾಗಿ ಯೋಚನೆ ಮಾಡುತ್ತಾನೆ. ಈ ರೀತಿಯಾಗಿರತಕ್ಕ ಕಥಾನಾಯಕನನ್ನು

ಎಣಿಯುವುದರ ಮೂಲಕವಾಗಿ ಇವತ್ತು ಬೆಳ್ಳಿಯ ತೆರೆಯ ಮೇಲೆ ಅದ್ಭುತವಾಗಿರತಕ್ಕ ಅನೇಕ ಸಿನಿಮಾ ಮಣಿಗಳು, ನಿಜ ಜೀವನದಲ್ಲಿ ಆ ತರಹ ಬದುಕುವುದಕ್ಕೆ ಆಗಂವುದಿಲ್ಲ. ರಾಜಕೀಯ ಮಂಬಿಂಡರಾಗಿ ಪರಿವರ್ತನೆಯಾಗಿರತಕ್ಕದ್ದು ತಮಗೆಲ್ಲಾ ಗೊತ್ತಿದೆ ಸಿನಿಮಾ ಕಲ್ಪನೆಯಾಗಿರ ತಕ್ಕದ್ದು ಆಪಾಯ ಕಾರಿಯಾಗಿರತಕ್ಕ ಅನೇಕ ಸಂದರ್ಭಗಳು ಇವೆ. ನಾಗರಹಾವು ಸಿನಿವಾದಲ್ಲಿ ಪ್ರತಿಭಟನೆಯ ದ್ಯೋತಕನಾಗಿರತಕ್ಕ ರಾಮಚಾರಿ ವಿಶ್ಲೇಷಣೆ ಎಲ್ಲಿಯವರೆಗೆ ಹೋಗುತ್ತದೆ ಎಂದರೆ ಅಂತರ ಜಾತಿಯ ವಿವಾಹ ಮಾಡಿಕೊಳ್ಳುವುದಿಲ್ಲ. ಸಾಮಾನ್ಯವಾಗಿರತಕ್ಕ ತಮಾಷೆಗಳ ನಿಯೋಜಿತ ಪ್ರತಿಭಟನೆಯ ಧ್ಯೋತಕವಾಗಿರುತ್ತವೆ. ಅಲ್ಲಿಯವರೆಗೆ ನಮ್ಮ ಮಕ್ಕಳು ರಾಮಚಾರಿ ಆಗಿಯೇ ಇರುತ್ತಾರೆ. ರಾಮಚಾರಿಯು ಪ್ರತಿಭಟನೆಯನ್ನು ಗುರುತಿಸತಕ್ಕ ವ್ಯಕ್ತಿಗಳಾಗಿ ದ್ದರೆ ಆಗ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಮಾರ್ಗರೇಟ್ ಕ್ರಿಶ್ಚಿಯನ್ ಹುಡುಗಿ ಆಕೆಯನ್ನು ಮದುವೆ ಮಾಡಿಕೊಳ್ಳಬಾರದು ಎಂದು ರಾಮಚಾರಿ ಒಂದು ರೀತಿಯಲ್ಲಿ ಧ್ವಂಧ್ವ ಯೋಚನೆ ಮಾಡುತ್ತಾನೆ. ಅದೇರೀತಿಯಾಗಿ ಅಪಕೃತವಾಗಿರತಕ್ಕ ಸಿನಿಮಾಗಳು ಕೂಡ ಇಂತಹ ಭಯಾತ್ಮಕವಾದ ಕಲ್ಪನೆ ಯನ್ನು ದುಡಿಯತಕ್ಕ ಜನಗಳಮೇಲೆ ಚಲನಚಿತ್ರಗಳ ಮೂಲಕ ಏರುವುದರ ಮೂಲಕ ಕ್ರಿಯಾತ್ಮಕವಾದ ಬದುಕನ್ನು ಬದುಕಂವುದಿಲ್ಲ. ಈ ಕಾರಣಕ್ಕಾಗಿ ಮಾನ್ಯ ಶ್ರೀನಿವಾಸ್‌ರವರು ತಂದಿರತಕ್ಕ ಮದ್ಯಪಾನ ನಿಷೇಧದ ಬಗ್ಗೆ ನಾವು ಪುನಃ ಯೋಚನೆ ಮಾಡತಕ್ಕದ್ದು ಇದೆ. ಮದ್ಯಪಾನ ನಿಷೇಧವನ್ನು ಮಾಡ ಬೇಕು ಅದು ಅಷ್ಟು ಸುಲಭವಾಗಿರತಕ್ಕದಲ್ಲ.

ಶ್ರೀ ಕೆ.ಎಚ್ ಶ್ರೀನಿವಾಸ್.– ನನ್ನ ನಿರ್ಣಯದಲ್ಲಿ ಮದ್ಯಪಾನ ನಿಷೇಧ ಮಾಡಬೇಕೆಂದು ಇಲ್ಲ ಮದ್ಯಪಾನದ ನಿಷೇಧ ಒಂದು ವಿಚಾರ ಒಂದು ಕಡೆ ಇರುವುದರಿಂದ, ಅದನ್ನು ಸೇರಿಸಿದಂತೆ ಇವತ್ತು ನಾವು ಅದರ ಬಗ್ಗೆ ಯೋಚನೆ ಮಾಡಬೇಕು. ಅದಕ್ಕಾಗಿ ಯೋಚನೆ ಮಾಡತಕ್ಕಂಥ ಶಕ್ತಿ ಇರು ವಂತಹ ಸಮಿತಿಯನ್ನು ಮಾಡಬೇಕೆಂದು ಆ ಸ್ಥಿತಿಗೆ ಬದಲಾವಣೆಯಾದಂತಹ ಯಾವುದಾದರೂ ಆರೋಗ್ಯಕರವಾದ ಸ್ಥಿತಿಗೆತಲುಪಿದ್ದೇವೆಯೇ ಎನ್ನುವುದನ್ನು ನೋಡಬೇಕು ಅಷ್ಟೆ.

ಶ್ರೀ ಎಂ. ಪಿ. ಪ್ರಕಾಶ್.—ಸಭಾಧ್ಯಕ್ಷರೆ ನನ್ನ ನಿಲುವು ಅಂತಹದ್ದೆ ಇದೆ. ಇಂತಹದ್ದರ ಬಗ್ಗೆ ಶ್ರೀಮಾನ್ ಶ್ರೀನಿವಾಸ್‌ರವರ ಪುನರ್ಚೀತನ ಏನಿದೆ ಪ್ರಾಯಶಃ ನೀವು ಎನ್ನುವುದರ ಬಗ್ಗೆ ಹೇಳಿದೆ ಮಾತು ಏನಿದೆ ಅದು ಮನುಷ್ಯ ಅನೇಕ ವಿಚಾರಗಳ ಮೂಲಕ, ನಿಯಮಗಳ ಮೂಲಕ ವಿಧಿನಿಯಮ ಗಳ ಮೂಲಕ, ಕಾನೂನುಗಳ ಮೂಲಕ ಇದನ್ನು ತರುವುದಕ್ಕೆ ಆಗುವುದಿಲ್ಲ. ಅಲೆಗ್ಸಾಂಡರ್ ಇಂತಹದ್ದೆ ವಿಚಾರದ ಬಗ್ಗೆ ನಾಗರೀಕರು ಗಡ್ಡ ಬಿಡಬಾರದೆಂದು ಎಂದು ಒಂದು ವಾದವನ್ನು ತಂದು ಅದನ್ನು ಕಾನೂನಿನ ಮೂಲಕ ಯಾರೂ ಗಡ್ಡವನ್ನು ಬಿಡಬಾರದೆಂದು ನಿಷೇಧ ಮಾಡುತ್ತಾನೆ. ಈ ನಿಷೇಧ ವನ್ನು ಮಾಡಿದ ಸಂದರ್ಭದಲ್ಲಿ ಪರ್ಷಿಯಾ ದೇಶದಿಂದ ಹಿಡಿದು ಸೈಬೀರಿಯಾ ದೇಶದವರೆಗೆ ಹಿಮಾ ಪ್ರದೇಶಗಳವರೆಗೂ ಹೋಗುತ್ತದೆ. ಆದರೆ ಗಡ್ಡವನ್ನು ಬಿಡಬಾರದೆಂದು ಕಾಯಿದೆ ಏನಿತ್ತು ಅದು ವೈಯಕ್ತಿಕವಾಗಿರತಕ್ಕದ್ದು ರೀತಿ ನಡವಳಿಕೆ ಅವರಿಗೆ ಸೇರಿದ್ದು. ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡತಕ್ಕದ್ದು ಸರಿಯಲ್ಲವೆಂದು ಹೋರಾಟ ನಡೆದಿರತಕ್ಕ ಇತಿಹಾಸದ ಉದಾಹರಣೆಗಳು ಇವೆ. ಶ್ರೀನಿವಾಸ್‌ರವರು ಮದ್ಯಪಾನ ನಿಷೇಧ ಮಾಡಬೇಕೆಂದು ಅಂದ ತಕ್ಷಣ ಅಲ್ಲಿ ಸ್ವಾತಂತ್ರ್ಯ ಹರಣ ಮಾಡಬೇಕೆನ್ನುವ ಕಾರಣ ಇರಬಹುದು. ಅಥವಾ ಮದ್ಯಪಾನ ನಿಷೇಧ ಮಾಡುವುದರ ಮೂಲಕ ಆಗಿರುವಂತಹ ದುಷ್ಪರಿಣಾಮ ಕುರಿತು ಯೋಚನೆ ಮಾಡಬೇಕಾಗುತ್ತದೆ, ದುಷ್ಪರಿಣಾಮಗಳು ಏನೆಂದರೆ, ಕಳ್ಳಬಟ್ಟಿ ಸಾರಾಯಿ ವ್ಯವಸ್ಥೆಯ ಮೂಲಕವಾಗಿ ಆರೋಗ್ಯಕರವಾಗಿರತಕ್ಕ ಮದ್ಯದ ಅಪಾಲಿನ ಪಾಸೀಯಗಳು ಏನಿವೆ ಅವುಗಳನ್ನು ಸೇವನೆ ಮಾಡಿ ಅನೇಕ ಸಂದರ್ಭಗಳಲ್ಲಿ ದುರಂತಗಳಿಗೆ ಒಳಗಾಗಿರತಕ್ಕ ಅಪಾಯ ಕೂಡ ಇದೆ. ಈ ಕಾರಣಕ್ಕಾಗಿ ಐತಿಹಾಸಿಕವಾದ ನಿರ್ಣಯಗಳ ಮೂಲಕ ದೂರ ಬಂದ ನಂತರ ಮತ್ತು ಹಿಂದೆ ಹೋಗತಕ್ಕದ್ದು ಸರಿಯಾಗಿರತಕ್ಕದ್ದಲ್ಲ. ಅದು ಅಷ್ಟು ಸಾಧು ವಾಗಿರತಕ್ಕದ್ದು ಆಗುವುದಿಲ್ಲ. ಈ ಕಾರಣಕ್ಕಾಗಿ ೧೯೭೭ರ ನಂತರ ತೆಗೆದುಕೊಂಡಿರತಕ್ಕ ನಿರ್ಣಯ ಗಳ ಮೂಲಕ ಮದ್ಯಪಾನ ನಿಷೇಧ ಗುಜರಾತ್ ರಾಜ್ಯ ಒಂದನ್ನು ಬಿಟ್ಟರೆ ತಮಿಳುನಾಡು ಮತ್ತೆ ಜಾರಿಗೆ ತರಬೇಕೆಂದು ಯೋಚನೆ ಮಾಡುತ್ತಿದೆ. ತಮಿಳುನಾಡಿನಲ್ಲಿಯೂ ಸಹ ಮದ್ಯಪಾನ ನಿಷೇಧ ಮಾಡಿದ್ದಾರೆ. ಪರಿಣಾಮಕಾರಿಯಾದ ಯೋಚನೆಯನ್ನು ಮಾಡಿದರೆ ಕುಡಿಯತಕ್ಕ ಜನರು ಡಿನೇಚರ್ಡ್ ಸ್ಪಿರಿಟ್, ಕಳ್ಳಬಟ್ಟಿ ಸಾರಾಯಿ ಕುಡಿಯುವುದರ ಮೂಲಕ ಸಾವಿರಾರು ಜನಗಳು ದುರಂತಕ್ಕೆ ಈಡಾಗಿ ಸಾವನ್ನು ಅಪ್ಪಿದ್ದಾರೆ. ಇಂತಹ ಸಾವುಗಳನ್ನು ನೋಡಿದಾಗ ಅಷ್ಟು ಮಟ್ಟಿಗೆ ಅಪೇಕ್ಷಣೀಯವಾಗಿರ

ತಕ್ಕದ್ದು ಅಲ್ಲ. ಆ ಕಾರಣಕ್ಕೆ ಶ್ರೀನಿವಾಸ್‌ರವರು ಹೇಳಿದಂತೆ ಅಪೇಕ್ಷಣೀಯ ಅಲ್ಲವೆಂದು ಹೇಳಿದ ತಕ್ಷಣವೇ ಗಲ್ಲಿ ಗಲ್ಲಿಗಳಲ್ಲಿ ಮನೆ ಮನೆಗೆ ಒಂದೊಂದು ಅಂಗಡಿ ಕೊಡತಕ್ಕದ್ದು, ಬಾರ್‌ಗಳನ್ನು ನಡೆಸತಕ್ಕದ್ದು ಸರಿಯಲ್ಲ. ನಮ್ಮ ಕಣ್ಣೆದುರಿಗೆ ನಮ್ಮ ಮಕ್ಕಳು ಮದ್ಯಪಾನದ ಚಟಕ್ಕೆ ದಾಸರಾಗಿರತಕ್ಕದ್ದು ಸಲ್ಲದು. ಆದ್ದರಿಂದ ಮುಂದಿನ ಜನಾಂಗದವರು ಎಚ್ಚರವಾಗಿರುವುದು ಅಗತ್ಯವಾಗಿದೆ.

ಆ ಸಂಸ್ಕೃತಿ ೧೯೬೬ರ ನಂತರ ಬೆಳೆದು ಬಂದಿದ್ದನ್ನು ಕಂಡಾಗ ಅಥವಾ ಜಾಸ್ ಸಂಸ್ಕೃತಿಗೆ ಒಳಗಾಗುವಂಥ ಪ್ರಯತ್ನವನ್ನು ಅಮೆರಿಕಾ ದೇಶದಲ್ಲಿ ನೋಡಿದಾಗ ಶ್ರೀ ಶ್ರೀನಿವಾಸ್‌ರಂತೆ ಅನೇಕ ಜನರಲ್ಲಿ ಇದರ ಬಗ್ಗೆ ಯೋಚನೆ ಮಾಡಿ ಎಲ್ಲಿಯವರೆಗೆ ಇದನ್ನು ಒಪ್ಪಬೇಕಾಗಿರತಕ್ಕಂಥದ್ದು ಇದೆ, ನೈತಿಕ ಸಂಹಿತೆಗಳನ್ನು ಸಮಾಜದಲ್ಲಿ ತಂದುಕೊಡತಕ್ಕಂಥಾದ್ದು, ಬರೀ ಧಾರ್ಮಿಕ ಮಠ ಮಾನ್ಯಗಳಿಗೆ ಮಾತ್ರ ಸಂಬಂಧಪಟ್ಟಿದ್ದು ಎಂದು ಅಲ್ಲ ಎಂದು ಸಾರ್ವಜನಿಕ ಚಿಂತನೆ ಮಾಡತಕ್ಕಂಥ ಎಲ್ಲಾ ವ್ಯಕ್ತಿಗಳು ಹಾಗೂ ಚಿಂತನಶಾಲಿಯಾಗಿರತಕ್ಕಂಥ ಜನಗಳು ತಮ್ಮ ಅಭಿಪ್ರಾಯಗಳನ್ನು ಹೇಳುವುದರ ಮೂಲಕ ಸಮಾಜದಲ್ಲಿರುವ ಇಂತಹ ನೈತಿಕ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಯಾವುದೇ ಒಂದು ಸಮಾಜ ನೈತಿಕ ಅಧಃಪತನಕ್ಕೆ ಒಳಗಾಗಿದ್ದರೆ ಅದು ಬಹಳ ವರ್ಷಗಳ ಕಾಲ ಸಮಾಜದ ಅಂತಃಸತ್ವವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕಾರಣಕ್ಕಾಗಿ ಈಗ ಇರುವಂಥ ರೀತಿಯಲ್ಲಿ ಮದ್ಯಪಾನಕ್ಕೆ ಎಷ್ಟರ ಮಟ್ಟಿಗೆ ದಾಸರಾಗಿದ್ದೇವೆ ಎನ್ನುವಂಥಾದಾಗಿದ್ದರೆ ಇದರಲ್ಲಿ ಒಂದು ಬಹಳ ಮುಂಖ್ಯವಾಗಿರತಕ್ಕಂಥ ಸಮಸ್ಯೆ ಇದೆ. ಇದನ್ನು ಶ್ರೀಮಾನ್ ಶ್ರೀನಿವಾಸ್ ಅವರೂ ಸಹ ಗುರುತಿಸಿರಬಹುದು. ಯಾವುದೇ ಒಂದು ವ್ಯವಸ್ಥೆಯಲ್ಲಿ ಸಂಪೂರ್ಣವಾಗಿರತಕ್ಕಂಥ ಅಧಿಕಾರ ಮತ್ತು ಹಣ ಇಡೀ ವ್ಯವಸ್ಥೆಯನ್ನು ಭ್ರಷ್ಟರನ್ನಾಗಿ ಮಾಡತಕ್ಕಂಥ ಶಕ್ತಿಯನ್ನು ಪಡೆದಿರುತ್ತದೆ. ಇದು ನಮ್ಮಲ್ಲಿ ಆಳುವ ಪಕ್ಷ ಎಂದು ಅಲ್ಲ ವಿರೋಧ ಪಕ್ಷದಲ್ಲಿರತಕ್ಕಂಥ ಅನೇಕ ಜನರ ಬಾಯನ್ನು ಮುಚ್ಚಿಸತಕ್ಕಂಥ ಶಕ್ತಿ ಈ ಹೆಂಡದ ಶಕ್ತಿಯಿಂದ ಬರತಕ್ಕದ್ದು ಇದೆ. ಹೆಂಡದ ಮೂಲಕವಾಗಿ ಅಮಲು ಮಾಡತಕ್ಕದ್ದು ಎಂದು ಅಲ್ಲ. ಹೆಂಡದ ಮೂಲಕವಾಗಿ ಬರತಕ್ಕ ಹಣ ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿ ಇರತಕ್ಕಂಥ ನವೆಮ್ಮೆಲ್ಲರ ಬಾಯಿಯನ್ನು ಮುಚ್ಚಿಸತಕ್ಕಂಥ ಒಂದು ಶಕ್ತಿ ಬರುವುದರಿಂದ ಯಾವುದೇ ಒಂದು ಅಧಿಕಾರ ಅಥವಾ ಹಣ ಕೇಂದ್ರೀಕೃತಗೊಳ್ಳತಕ್ಕಂಥಾದ್ದು ಏನಿದೆ ಅದು ಇಡೀ ಸಮಾಜದ ಆರೋಗ್ಯಕರವಾಗಿರತಕ್ಕಂಥ ಬೆಳವಣಿಗೆಗೆ ಅದು ಬಹಳ ಕುಟೀರಪ್ರಾಯವಾಗಿರತಕ್ಕಂಥಾದ್ದು ಇದೆ ಈ ಕಾರಣಕ್ಕಾಗಿಯೇ ಕೂಡ ಇದರ ಮೇಲೆ ಇಂತಹ ಹತೋಟಿ ಕ್ರಮ ಕೈಗೊಳ್ಳತಕ್ಕದ್ದು, ತತ್‌ಕ್ಷಣದಲ್ಲಿ ಮನುಷ್ಯನ ಸ್ವಭಾವ ಕೂಡ ನಾವು ಎಷ್ಟೇ ನೀತಿ ಸಂಹಿತೆಗಳನ್ನು ಹೇಳಿದರೂ ಕೂಡ ಅತನ ಮುಂದೆ ಎಂತಹ ಆಸೆ ಆಕಾಂಕ್ಷೆಗಳನ್ನು ನೆರವೇರಿಸತಕ್ಕಂಥ ಸಲಕರಣೆಗಳನ್ನು ವ್ಯವಸ್ಥೆಯನ್ನು, ಅವಕಾಶವನ್ನು ಕಲ್ಪಿಸಿಕೊಡಬಾರದು. ಅಂತಹ ಅವಕಾಶ ಕಲ್ಪಿಸಿಕೊಟ್ಟಾಗ ಆ ಮನುಷ್ಯ ಕೂಡಲೇ ಅವುಗಳಿಗೆ ಆಕರ್ಷಣೆಗೆ ಒಳಗಾಗತಕ್ಕಂಥ ಸಂದರ್ಭ ಇದೆ. ಎಲ್ಲಾ ಮನುಷ್ಯರೂ ಕೂಡ ನಿಶ್ಚಿತತೆ, ದೃಢತೆಯನ್ನು ಮಾನಸಿಕವಾಗಿ ಪಡೆದಂಥವರು ಆಗಿರುವುದಿಲ್ಲ. ಆದ್ದರಿಂದ ಇವತ್ತು ಬಸ್ಸು ನಿಲ್ದಾಣಗಳಲ್ಲಿ ನಾಲ್ಕೈದು ರೀತಿಯಾಗಿರತಕ್ಕಂಥ ಸಾರಾಯಿ ಅಂಗಡಿಗಳನ್ನು, ಹೆಂಡದ ಅಂಗಡಿಗಳನ್ನು ಪ್ರಾರಂಭಿಸಲು ಪರವಾನಗಿ ಕೊಟ್ಟಿರತಕ್ಕಂಥ ಉದಾಹರಣೆಗಳು ಇವೆ. ನಾನು ಕೆ. ಜಿ. ಎಫ್ ಗೆ ಹೋದಂಥ ಸಂದರ್ಭದಲ್ಲಿ, ಅಲ್ಲಿಯ ನಗರ ಸಭೆಯವರು ಒಂದು ಸಂದರ್ಭದಲ್ಲಿ ಹೆಣ್ಣು ಮಕ್ಕಳು ಪ್ರಯಾಣಿಕರಿಗೆ ಕೊಟ್ಟಿರತಕ್ಕಂಥ ಮೂತ್ರಿಗಳ ಹಾಗೆ ನೆಲಸಮ ಮಾಡಿ ಆ ಜಾಗದಲ್ಲಿ ಹೆಂಡದ ಅಂಗಡಿಗಳನ್ನು ನಡೆಸಲು ಪರವಾನಗಿ ಕೊಟ್ಟಿರತಕ್ಕಂಥ ಉದಾಹರಣೆ ಇದೆ. ಇವತ್ತಿನ ಸಂದರ್ಭದಲ್ಲಿ ಇದು ಬರೀ ನೇರವಾಗಿ ಇರತಕ್ಕಂಥ ಉಪಾಯ ಅಲ್ಲ. ಮದ್ಯಪಾನ ಮಾಡಿರತಕ್ಕಂಥ ವಾಹನ ಚಾಲಕ ಅಲ್ಲಿ ಅಪಾಯಕಾರಿಯಾಗಿರತಕ್ಕಂಥ ಅನೇಕ ಜನ ಪ್ರಯಾಣಿಕರನ್ನು ಕೊಲ್ಲುವಂಥ, ಅಪಘಾತಕ್ಕೆ ಒಳಪಡಿಸುವಂಥ. ಸಂದರ್ಭ ಕೂಡ ಇದೆ. ಈ ಕಾರಣಗಳು ಇರುವುದರಿಂದ ಇದನ್ನು ಇಷ್ಟು ಸುಲಭವಾಗಿ. ಇಷ್ಟೇ ನಿರ್ಧಾರವಾಗಿ ಎನ್ನುವಂಥಾದ್ದು ಅಲ್ಲ. ಇದರ ಬಗ್ಗೆ ಚರ್ಚೆ ಆಗಬೇಕಾಗಿರತಕ್ಕಂಥಾದ್ದು ಅತ್ಯಂತ ಮುಖ್ಯವಾಗಿರುವುದರಿಂದ ಈ ಒಂದು ಚರ್ಚೆ ಇಡೀ ಕರ್ನಾಟಕ ರಾಜ್ಯದ ಜನತೆಯ ಪೂರ್ಣದರ್ಶನ ಮಾಡಬೇಕಾಗಿರತಕ್ಕ ಅನಿವಾರ್ಯತೆ ಮತ್ತು ಅಗತ್ಯತೆ ಇರುವುದರಿಂದ ಈ ಸದನದ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡತಕ್ಕದ್ದು ಮತ್ತು ಈ ವಿಚಾರಗಳ ಬಗ್ಗೆ ವಿಭಿನ್ನವಾಗಿರತಕ್ಕಂಥ ಅಭಿಪ್ರಾಯ ಕೂಡತಕ್ಕಂಥ ಜನರ ಬಗ್ಗೆ ಚರ್ಚೆಮಾಡಿ ಸಂಧಾನಕ್ಕೆ ಇಳಿದು ಅವುಗಳ ಮೂಲಕ ಮದ್ಯಪಾನ ಪರ ಮತ್ತು ವಿರೋಧವಾಗಿರ

ತಕ್ಕಂಥ ಜನತೆಯಂ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಈ ಸಮಾಜ ಯಾವ ನಿಲುವನ್ನು ಯಾವ ಹಂತದಲ್ಲಿ ಎಷ್ಟರ ಮಟ್ಟಿಗೆ ತೆಗೆದುಕೊಳ್ಳಬೇಕಾಗಿದೆ ಎಂಬುದರ ಬಗ್ಗೆ ಯೋಚನೆ ಮಾಡಬೇಕೆಂದು ಏನೂ ಸಲಹೆಯನ್ನು ಕೊಟ್ಟಿದ್ದಾರೆ. ಇದು ಅತ್ಯಂತ ಸೂಕ್ತವಾಗಿರತಕ್ಕಂಥ ವ್ಯವಹಾರಿಕವಾಗಿರತಕ್ಕಂಥ ಮಾಂದಿನ ತಲೆಮಾರಿನವರು ಶಪಿಸದೇ ಇರತಕ್ಕಂಥ ಒಂದು ಸೂಚನೆ ಆಗಿರುವುದರಿಂದ ಇದನ್ನು ನಾನು ಸ್ವಾಗತ ಮಾಡುತ್ತೇನೆ, ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಬೇರೆ ಎಲ್ಲಾ ಮಾನ್ಯ ಸದಸ್ಯರ ಅಭಿಪ್ರಾಯ ನಡೆಯಲಾ ಉನ್ನತ ಮಟ್ಟದ ಸದನದ ಸಮಿತಿಯಂನ್ನು ರಚನೆ ಮಾಡಿ ಸರ್ಕಾರಕ್ಕೆ ಬೇಕಾದರೆ ಸಮಸ್ಯೆಯ ಬೇರೆ ಬೇರೆ ಆಯಾಮಗಳನ್ನು ತೋರಿಸುವುದಕ್ಕೆ ಒಂದು ನಿಲುವೆಗೆ ಬರತಕ್ಕದ್ದಾ ಮುಖ್ಯವೆಂದು ಬಹಳ ಮುಖ್ಯವಾಗಿರತಕ್ಕಂಥ ಈ ಒಂದು ಗೊತ್ತುವಳಿಯನ್ನು ತಂದಿರತಕ್ಕಂಥ ಶ್ರೀಮಾನ್ ಶ್ರೀನಿವಾಸ್ ಅವರಿಗೆ ಅಭಿನಂದಿಸಿ ನಾನು ಇದನ್ನು ಸ್ವಾಗತ ಮಾಡುತ್ತೇನೆ.

† ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).–ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕಿಂತ ಪ್ರಥಮವಾಗಿ ಈ ಖಾಸಗಿ ನಿರ್ಣಯವನ್ನು ಸದನದಲ್ಲಿ ಮಂಡಿಸಿರತಕ್ಕಂಥ ಶ್ರೀ ಕೆ. ಎಚ್. ಶ್ರೀನಿವಾಸ್ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಂದುವರೆಸುತ್ತೇನೆ.

ಶೆ-೩೦ ಪಿ. ಎಂ.

ಈ ನಿರ್ಣಯಂ, ಈ ಸದನದ ಪ್ರತಿಯೊಬ್ಬ ಸದಸ್ಯರೂ ಕೂಡ ಈ ನಿಟ್ಟಿನಲ್ಲಿ ಚಿಂತನೆ ಮಾಡತಕ್ಕಂಥ ಹಲವು ಸಂಧಾರಿತ ಅಂಶಗಳನ್ನು ಒಳಗೊಂಡಿದೆ. ಇಲ್ಲಿ ಎರಡು ಪ್ರಶ್ನೆಗಳನ್ನು ತುಲನಾತ್ಮಕವಾಗಿ ನಾವು ಚಿಂತನೆ ಮಾಡಬೇಕು. ಒಂದನೆಯದು, ಬಡ ವರ್ಗದ ಮೇಲೆ ಮದ್ಯಪಾನ ಮಾಡತಕ್ಕಂಥ ದುಷ್ಪರಿಣಾಮಂ. ಎರಡನೆಯದು ಒಟ್ಟಿ ಸಾಮೂಹಿಕ ಸಮಾಜದ ಮೇಲೆ ಮದ್ಯಪಾನ ಬೀರತಕ್ಕಂಥ ತೀವ್ರ ಕಳವಳಕಾರಿ ಪರಿಣಾಮಗಳು. ಈ ಭಾವನೆಗಳಿಗೆ, ಚಿಂತನೆಗಳಿಗೆ, ಚಿಂತನೆ ಮಾಡಂವುದಾದರೆ, ಈ ಖಾಸಗಿ ನಿರ್ಣಯದಲ್ಲಿ ಕೊಟ್ಟಿರತಕ್ಕಂಥ ವಿಚಾರ ಚಿಂತನೆಗೆ ಬರುತ್ತದೆ. ಜೊತೆಗೆ ನಮ್ಮೆಲ್ಲರನ್ನೂ ಯಾವುದೋ ಒಂದು ಭಾವನೆಗೆ ಎಡೆಕೊಟ್ಟಿದೆ. ಈ ನಿರ್ಣಯದ ಬಗ್ಗೆ ಸಾರಾಸಗಟಾಗಿ ಒಟ್ಟು ಸದನದ ಸಮಿತಿಯನ್ನು ಮಾಡುವುದರ ಮುಖಾಂತರವಾಗಿ ಒಂದು ಸಾಮಾಜಿಕ ಸುಧಾರಣೆಗಳನ್ನು ಅಥವಾ ಬದಲಾವಣೆಗಳನ್ನು ವ್ಯವಸ್ಥೆಯ ಹೊಸ ರೂಪವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿದೆ ಎಂದೂ ನನ್ನ ಭಾವನೆ.

(ಡಾ. ಪುಷ್ಪಾವತಿಯವರು ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಈ ಮದ್ಯಪಾನ ಗ್ರಾಮೀಣ ಪ್ರದೇಶದಲ್ಲಿ ಎಂತಹ ಕೆಟ್ಟ ಪರಿಣಾಮ ಬೀರಿದೆ. ಈ ಪರಿಣಾಮದಿಂದಾಗಿ, ಕೌಟುಂಬಿಕ, ಸಾಮಾಜಿಕ ವಂತ್ತು ದೈಹಿಕವಾಗಿ, ಆರ್ಥಿಕವಾಗಿ ಒಂದು ಕುಟುಂಬ ಒಂದು ಹಳ್ಳಿ ಅಥವಾ ಒಬ್ಬ ವ್ಯಕ್ತಿ ಹಾಳಾಗುತ್ತಾನೆ. ಸಂಪೂರ್ಣವಾಗಿ, ನೈತಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಅಧಃಪತನ ಹೊಂದುವುದಕ್ಕೆ ಸಾಧ್ಯವಿದೆ. ಇಷ್ಟೆಲ್ಲಾ ಪರಿಣಾಮಗಳನ್ನು ಈ ಮದ್ಯಪಾನ ಗ್ರಾಮೀಣ ಜನರ ಬದುಕಿನಲ್ಲಿ ತೀವ್ರ ರೀತಿಯಲ್ಲಿ ಕೆಟ್ಟ ಪರಿಣಾಮವನ್ನು ಬೀರಿದೆ. ಗ್ರಾಮೀಣ ಪ್ರದೇಶದಲ್ಲಿ ಬದುಕುತಕ್ಕ ಜನಗಳು. ಪ್ರಾಯಶಃ ಮಾನ್ಯ ಪ್ರಕಾಶ್‌ರವರು ಹೇಳಿದಂತೆ, ಮನುಷ್ಯನ ಮನಸ್ಸು ಆನೇಕ ದೌರ್ಬಲ್ಯದ ಅಂಶಗಳನ್ನು ಹೊಂದಿದೆ. ಈ ದೌರ್ಬಲ್ಯದ ಅಂಶಗಳು ಅನಾಥ ಪ್ರಜ್ಞೆಯನ್ನು ತುಂಬಿಸಿಕೊಳ್ಳುತ್ತವೆ. ಏಕೆಂದರೆ, ಮಗುವು ತಾಯಿಯ ಗರ್ಭದಿಂದಲೇ, ತಾಯಿಯನ್ನು ಅವಲಂಬಿಸಿಕೊಂಡಿರುತ್ತದೆ. ದೈಹಿಕ ಅಂಶಗಳನ್ನೂ, ಮಾನಸಿಕ ಅಂಶಗಳನ್ನೂ ಆಳವಡಿಸಿ ಕೊಂಡು ಬಂದಿರುತ್ತದೆ. ಕೆಲ ದಿನಗಳ ನಂತರ, ತಂದೆತಾಯಿ, ಸಮಾಜ ಇವೆಲ್ಲವನ್ನೂ ಕಳೆದುಕೊಳ್ಳುವ ಪರಿಸ್ಥಿತಿ ಬಂದಾಗ ಯಾವುದಾದರೊಂದನ್ನು ಅವಲಂಬಿಸಬೇಕೆಂಬ ಭಾವನೆ ತಡವಾಗಿ ಬರುತ್ತದೆ. ಇಂತಹ ಸಮಯವೇ ಅನಾಥ ಪ್ರಜ್ಞೆ. ಇದನ್ನು ಹೋಗಲಾಡಿಸುವುದಕ್ಕೆ, ಮನಸ್ಸನ್ನು ಗಟ್ಟಿ ಮಾಡಿಕೊಳ್ಳುವುದಕ್ಕೆ ಮದ್ಯಪಾನ, ಧೂಮಪಾನ ಮುಂತಾದ ಬಲಿಗಳಿಗೆ ಈಡಾಗುತ್ತೇವೆ ಎಂದು ಹೇಳಿದರು. ಇಂತಹ ಒಂದು ದೃಷ್ಟಿಕೋನ, ಕೆಟ್ಟ ಪರಿಣಾಮ, ಸಮಾಜದ ಮೇಲೆ ಆಗಲಿ ಕುಟುಂಬದ ಮೇಲೆ ಆಗಲಿ, ಯಾವುದಾದರೊಂದು ದೀರ್ಘವಾದ ಚಿಂತನೆ ನಡೆಸಿ, ಒಟ್ಟಾರೆ ಯಾವ ರೀತಿ ಎದುರಿಸ ಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರ ಬೇಕಾಗಿದೆ. ಒಂದು ಹಳ್ಳಿಯಿಂದ ಹಾಲು ಪಟ್ಟಣಕ್ಕೆ ಬರುತ್ತಿದೆ, ಆದೇ ಪಟ್ಟಣದಿಂದ ಸಾರಾಯಿ

ಹಳ್ಳಿಗಳಿಗೆ ಹೋಗುತ್ತಿದೆ. ಇದು ಅತ್ಯಂತ ಗಹನವಾಗಿ, ಗಂಭೀರವಾಗಿ ಚಿಂತನೆ ಮಾಡಬೇಕಾಗಿರತಕ್ಕ ವಿಚಾರವಾಗಿದೆ. ಪ್ರತಿಯೊಂದು ಹಳ್ಳಿಗಳಲ್ಲಿಯೂ ಬಾರ್‌ಗಳಾಗಿವೆ. ನಮ್ಮ ಸರ್ಕಾರದವರು ಏಕೆ ಇದರ ವಿಚಾರದಲ್ಲಿ ದೊಡ್ಡ ಮನಸ್ಸು ಮಾಡಿದ್ದಾರೋ ಗೊತ್ತಿಲ್ಲ, ಈ ಬಾರ್‌ಗಳು, ಎಂತಹ ಪರಿಣಾಮವನ್ನು ಎಂತಹ ಕೆಟ್ಟ ರೀತಿಯನ್ನು, ನೈತಿಕ ಅಧಃಪತನವನ್ನು ಗ್ರಾಮೀಣ ಮಟ್ಟದಲ್ಲಿ ಹುಟ್ಟಿ ಹಾಕುತ್ತಿವೆ ಎಂಬುದು ಎಲ್ಲಾ ರಾಜಕಾರಣಿಗಳಿಗೂ ತಿಳಿದಿರತಕ್ಕ ವಿಚಾರ. ಇದು ಈಗಾಗಲೇ ನಮ್ಮ ಎಲ್ಲಾ ರಾಜಕಾರಣಿಗಳಿಗೂ ತಿಳಿದಿರತಕ್ಕ ವಿಚಾರ. ಸಮಾಜ ಸುಧಾರಕರು ಇದರ ಬಗ್ಗೆ ಚಿಂತನೆ ಈಗ ಗಂಭೀರವಾಗಿ ತೆಗೆದುಕೊಂಡು ನಾಗರೀಕರ ಬದುಕಿನಲ್ಲಿ ಈ ಮದ್ಯಪಾನದ ಮಧ್ಯ ನಡೆಸಿದ್ದಾರೆ. ಹೋರಾಟ ಮಾಡಿದ್ದಾರೆ. ಇವೆಲ್ಲಾ ಚಿಂತನೆಗಳು ನಡೆದುಹೋಗಿದ್ದರೂ ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಆದ ಕಾರಣ ಸರಕಾರ ಈ ವಿಚಾರವನ್ನು ಈಗ ಗಂಭಿರವಾಗಿ ತೆಗೆದುಕೊಂಡು ನಾಗರೀಕರ ಬದುಕಿನಲ್ಲಿ ಈ ಮದ್ಯಪಾನದ ಮದ್ಯ ಪ್ರವೇಶವನ್ನು ಸಾಧ್ಯವಾದಷ್ಟೂ ಕೂಡಾ ತಡೆಹಿಡಿಯುವುದಕ್ಕೆ ಪ್ರಯತ್ನ ಪಡಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರೆ, ಇನ್ನು ಒಂದು ಕಥೆ ನನಗೆ ನೆನಪಾಗುತ್ತದೆ. ಒಂದು ಸಲ 'ವಿಧಿ'' ಮನೆಯ ಯಜಮಾನನಿಗೆ ಹೇಳಿತಂತೆ ನೀನು ನಿನ್ನ ಸೇವಕನನ್ನ ಕೊಲೆ ಮಾಡು, ಇಲ್ಲವೇ ನಿನ್ನ ಹೆಂಡತಿಯನ್ನು ಹೊಡಿ, ಅದೂ ಇಲ್ಲದೇ ಹೋದರೆ ಮದ್ಯವನ್ನು ಕುಡಿ ಎಂದು ಹೇಳಿತಂತೆ. ಈ ಕೆಟ್ಟ ಪಾಪದ ಕೆಲಸವನ್ನು ಮಾಡಬೇಕು ಎಂದು ಹೇಳಿತಂತೆ. ಮನೆಯ ಯಜಮಾನ ಯೋಚನೆ ಮಾಡಿದನಂತೆ, ಸೇವಕ ತನ್ನ ಚಿಕ್ಕಂದಿನಿಂದಲೂ ಕೂಡಾ ನನ್ನ ಪಾಲನೆ ಪೋಷಣೆ ಮಾಡಿಕೊಂಡು ಬಂದಿದ್ದಾನೆ, ಅವನನ್ನು ಕೊಲ್ಲಲು ಸಾಧ್ಯವಿಲ್ಲ, ಇನ್ನು ಹೆಂಡತಿ, ನನ್ನ ಅರ್ಧಾಂಗಿ, ಅವಳನ್ನು ಹೊಡೆಯುವುದು ಹೇಗೆ, ಹೀಗಾಗಿ ಈ ಎರಡೂ ಬೇಡ ಮದ್ಯವನ್ನ ಕುಡಿಯುತ್ತೇನೆ ಎಂದು ಹೇಳಿ ಕುಡಿಯುತ್ತಾನೆ. ಮದ್ಯ ಕುಡಿದ ತಕ್ಷಣ ಮನೆಯಲ್ಲಿ ಜಗಳ ಶುರುವಾಗುತ್ತದೆ, ಜಗಳ ಶುರುವಾದ ತಕ್ಷಣ ಅವನು ತನ್ನ ಹೆಂಡತಿಯನ್ನು ಹೊಡೆಯುವುದಕ್ಕೆ ಹೋಗುತ್ತಾನೆ, ಆಗ ಸೇವಕ ಅದನ್ನು ತಡೆಯುವುದಕ್ಕೆ ಹೋಗುತ್ತಾನೆ, ಸೇವಕನಿಗೆ ಹೊಡೆತ ಬಿದ್ದು, ಅವನು ಸತ್ತು ಹೋಗುತ್ತಾನೆ. ಮದ್ಯ ಕುಡಿದುದರಿಂದ ಮನೆಯ ಯಜಮಾನ ಮೂರು ತಪ್ಪುಗಳನ್ನೂ ಮಾಡುತ್ತಾನೆ. ಯಾವುದಾದರೂ ಒಂದು ತಪ್ಪು ಮಾಡಬಹುದಾಗಿತ್ತು, ಆದರೆ ಮದ್ಯ ಕುಡಿದುದರಿಂದ ಮೂರು ತಪ್ಪು ಕೆಲಸಗಳನ್ನೂ ಮಾಡುತ್ತಾನೆ. ಮೂರು ತಪ್ಪು ಕೆಲಸಗಳನ್ನೂ ವಿಧಿ ಅವನ ಕೈಲಿ ಮಾಡಿಸುತ್ತದೆ. ಆದುದರಿಂದ ನಾವು ಸ್ವಲ್ಪ ಗಂಭೀರವಾಗಿ ಇದನ್ನು ಯೋಚನೆ ಮಾಡಬೇಕು. ಈ ಖಾಸಗಿ ನಿರ್ಣಯದಲ್ಲಿ, ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕೆಂಬುದು ಮಾನ್ಯ ಶ್ರೀನಿವಾಸ್‌ರವರ ಅಭಿಪ್ರಾಯ ಅಲ್ಲ. ಆದರೆ ಮದ್ಯಪಾನವನ್ನು ತಪ್ಪುಬಾದಿಗೆ ತರತಕ್ಕಂಥಾದ್ದು, ಆದರಿಂದ ಆಗತಕ್ಕ ದುಷ್ಪರಿಣಾಮಗಳಿಗೆ ಮಿತಿಯನ್ನು ಹಾಕತಕ್ಕದ್ದು, ಅದಕ್ಕೆ ಒಂದು ಲಕ್ಷ್ಮಣ ರೇಖೆಯನ್ನು ಹಾಕತಕ್ಕದ್ದು ಮತ್ತು ಇದಕ್ಕೆ ನಿಶ್ಚಿತವಾದ ಒಂದು ನಿಲ್ಲಿಯ ರೂಪವನ್ನು ಕೊಡತಕ್ಕದ್ದು, ಈ ಖಾಸಗಿ ನಿರ್ಣಯದ ಅಭಿಪ್ರಾಯವಾಗಿದೆ. ಪ್ರಸ್ತಾವನೆಯ ಚಟ ಇವತ್ತು ವಿಶೇಷವಾಗಿ ಹರಡಿದ್ದು, ಇದು ಶ್ರೀಸಾಮಾನ್ಯರ ಹಿತಕ್ಕೆ ಮಾರಕವಾಗಿ ಪರಿಣಮಿಸಿದೆ. ಇದು ಹರಡುವಲ್ಲಿ ಪಡೆದಿರುವ ವೇಗವನ್ನು ಇವತ್ತು ಗಂಭೀರವಾಗಿ ತೆಗೆದುಕೊಳ್ಳಬೇಕು. ಶ್ರೀಸಾಮಾನ್ಯರ ಹಾಗೂ ಬಡ ಜನರ ಹಿತಕ್ಕೆ ಮಾರಕವಾಗಿ ಇದು ಪರಿಣಮಿಸಿದೆ, ಇದರಿಂದ ಈಗಾಗಲೇ ಹಡೆದಿರತಕ್ಕಂಥ ದುರಂತಗಳನ್ನು ಗಮನದಲ್ಲಿ ಇಟ್ಟುಕೊಂಡು, ಇದರ ಬಗ್ಗೆ ಪರಿಶೀಲಿಸಿ ಬದಲಿ ನೀತಿ ಹಾಗೂ ವ್ಯವಸ್ಥೆಯನ್ನು ಮಾಡಲು ಸದನದ ಸಮಿತಿಯನ್ನ ಮಾಡಬೇಕೆಂದು ನಿರ್ಣಯದಲ್ಲಿ ಹೇಳಲಾಗಿದೆ. ಮಾನ್ಯ ಪ್ರಕಾಶ್‌ರವರು ಮಾತನಾಡುತ್ತಾ ಹೇಳಿದರು ಪಾಪ ಪುಣ್ಯಗಳಿಂಬುದು ಒಂದು ಕಲ್ಪನೆ ಇದನ್ನು ನಾನು ಒಪ್ಪುವುದಿಲ್ಲ, ಪಾಪ ಪುಣ್ಯ ಎನ್ನತಕ್ಕಂಥಾದ್ದು ಕಲ್ಪನೆಗಳಲ್ಲ. ಪಾಪ ಪುಣ್ಯ ಎನ್ನತಕ್ಕಂಥಾದ್ದು ಒಂದು ಕ್ರಿಯೆ. ಸಮಾಜದಲ್ಲಿ ಜೀವನದಲ್ಲಿ ಅಳವಡಿಸಿಕೊಂಡು ಖಂದಿರತಕ್ಕಂಥ ಒಂದು ಕ್ರಿಯೆ. ಪಾಪ ಪುಣ್ಯಗಳು ಸ್ವರ್ಗ ನರಕಗಳು ಕಲ್ಪನೆಗಳು ಎಂದು ಹೇಳತಕ್ಕಂಥದ್ದು ಬೇರೆ ವಿಚಾರ ಆದರೆ ಪಾಪ ಪುಣ್ಯ ಎನ್ನತಕ್ಕಾಂಥಾದ್ದು ಮನಸ್ಸಿನ ಸ್ತರದಲ್ಲಿ ಹೊಂದಿಕೆಯ ಗತಕ್ಕಂಥ ಒಂದು ಕ್ರಿಯೆ ಅಥವಾ ಚಟುವಟಿಕೆ. ಇವತ್ತು ಜೀವನದಲ್ಲಿ ನಾವು ಸರಿಯಾಗಿ ಬದುಕಬೇಕು. ಸಮಾಜದಲ್ಲಿ ಮನುಷ್ಯನ ಬದುಕಿಗೆ ಅರ್ಥ ಬರಬೇಕಾದರೆ ಎಲ್ಲಾ ಭಾವನೆಗಳನ್ನ ಕ್ರೋಢೀಕರಿಸಿ ಒಂದು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ವ್ಯಕ್ತಿತ್ವವನ್ನು ಗೌರವಿಸುವಾಗ ನಾವು ಎಲ್ಲಾ ಮೌಲ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ಅಂದಾಜು ಮಾಡ

ಬೇಕಾಗುತ್ತದೆ. ಇವತ್ತು ಸಾರಾಯಿ ಒಳ್ಳೆಯದಲ್ಲ, ಹೆಂಡ ಒಳ್ಳೆಯದಲ್ಲ ನಿಜ. ಇದಕ್ಕೆ ಜೋತು ಬಿದ್ದವರೆಲ್ಲರೂ ಸಹಬಡವರು ಈ ಜನತಂತ್ರ ವ್ಯವಸ್ಥೆಯಲ್ಲಿ ನಾವು ಇದನ್ನು ಗುರುತಿಸಬೇಕಾಗಿದೆ. ಇದಕ್ಕೆ ಜೋತುಬಿದ್ದವರೆಲ್ಲರೂ ಬಡವರು ಎಂಬ ಯಾವ ತೀರ್ಮಾನಕ್ಕೆ ನಾವು ಬಂದಿದ್ದೇವೆ, ಅದನ್ನು ಸರಿಯಾಗಿ ಗುರುತಿಸಬೇಕಾಗುತ್ತದೆ. ನಾವೂ ಕೂಡಾ ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕಾಗುತ್ತದೆ. ಈ ಖಾಸಗಿ ನಿರ್ಣಯ ಏನಿದೆ, ಪ್ರಸ್ತುತ ನಾವು ನೋಡತಕ್ಕಂಥ ಸಮಾಜದ ಯುವ ಜನರ ರೀತಿ ನೀತಿ ಮತ್ತು ಅವರು ಹೋಗುತ್ತಿರತಕ್ಕಂಥ ಅಡ್ಡದಾರಿಗಳು ಇವೆಲ್ಲವನ್ನು ತುಲನಾತ್ಮಕವಾಗಿ ಒಪ್ಪಿ, ಈ ಖಾಸಗಿ ನಿರ್ಣಯದಲ್ಲಿ ಹೇಳಿರತಕ್ಕ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ನಾವು ಒಂದು ತೀರ್ಮಾನಕ್ಕೆ ಬರುವುದಾದರೆ, ಈ ಖಾಸಗಿ ನಿರ್ಣಯ ಏನಿದೆ ಇದು ಅತ್ಯಂತ ಸಮಂಜೋಜಿತವಾಗಿದೆ, ಸಂದರ್ಭೋಜಿತವಾಗಿದೆ, ಮತ್ತು ಇಲ್ಲಿ ಯಾವುದೇ ಬದಲಿ ಯತ್ನಗಳನ್ನು ಮಾಡದೇ ಸದನದ ಸಮಿತಿ ಮಾಡಿ, ಈ ಮದ್ಯಪಾನದ ದುಷ್ಪರಿಣಾಮವನ್ನು ಹಾವಳಿಯನ್ನು ಹೋಗಲಾಡಿಸಿ ಇದಕ್ಕೆ ಒಂದು ಹೊಸ ರೂಪವನ್ನು ಹೊಸ ಆರ್ಥವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕಂ. ಈ ನಿಟ್ಟಿನಲ್ಲಿ ಈ ಸಭೆ ಒಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಇವತ್ತು ಈ ಒಂದು ಖಾಸಗಿ ನಿರ್ಣಯ ಇದೆ ಎನ್ನುವುದು ನನಗೆ ಗೊತ್ತಿರಲಿಲ್ಲ. ಒಂದು ವೇಳೆ ಈ ಖಾಸಗಿ ನಿರ್ಣಯ ಇದೆ ಎಂದು ಗೊತ್ತಾಗಿದ್ದರೆ ನಾನು ಇನ್ನು ಚೆನ್ನಾಗಿ ತಯಾರಿ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಣೆ ಮಾಡಿಕೊಂಡು ಬಂದು ಹೆಚ್ಚು ಬೆಳಕು ಚೆಲ್ಲಿ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಶ್ರೀನಿವಾಸ್‌ರವರು ತಂದಿರತಕ್ಕಂಥ ನಿರ್ಣಯವನ್ನು ನಾವು ಬೆಂಬಲಿಸಬಹುದಾಗಿತ್ತು. ನಮ್ಮ ಮಾನ್ಯ ಸದಸ್ಯರಾದಂಥ ಇದಿನಬ್ಬನವರು ಈ ಖಾಸಗಿ ನಿರ್ಣಯದ ಮೇಲೆ ಮಾತನಾಡುವಾಗ ಅವರು ತಮ್ಮ ಭಾಷಾ ಶೈಲಿಯಲ್ಲಿಯೇ ಒಂದು ಕವನವನ್ನು ಕಟ್ಟಿ ಈ ಸದನದಲ್ಲಿ ಹೇಳಿದರು. ಅವರು ಹೇಳಿದಂತಹ ಕವನದಲ್ಲಿ ಅನೇಕ ಮಾರ್ಮಿಕವಾದಂಥ ವಿಷಯಗಳು ಅಡಕವಾಗಿದ್ದವು. ಈ ಖಾಸಗಿ ನಿರ್ಣಯದಲ್ಲಿ ಅನೇಕ ಸಾಮಾಜಿಕ ವಿಚಾರಗಳು, ಕುಟುಂಬಕ್ಕೆ ಸಂಬಂಧಪಟ್ಟ ವಿಚಾರಗಳು ವ್ಯಕ್ತಿಗತವಾಗಿರತಕ್ಕಂಥ ವಿಚಾರಗಳು ಅಡಕವಾಗಿರುವುದರಿಂದ ನಾವು ಈ ಖಾಸಗಿ ನಿರ್ಣಯವನ್ನು ಬೆಂಬಲಿಸಬೇಕಾಗಿದೆ. ಮಾನ್ಯ ಸದಸ್ಯರು ತಮ್ಮ ನಿರ್ಣಯದಲ್ಲಿ ಹೇಳಿರುವಂತೆ ಸದನದ ಸಮಿತಿಯನ್ನು ಸರ್ಕಾರ ಮಾಡಬೇಕು... .....

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಸಭಾಧ್ಯಕ್ಷಿಣಿಯವರೇ ಅನೇಕ ಜನ ಮಾನ್ಯ ಸದಸ್ಯರು ತಿಳಿದುಕೊಂಡಿರುವಂತೆ ನಾನು ನನ್ನ ಖಾಸಗಿ ನಿರ್ಣಯದಲ್ಲಿ ಸದನದಸಮಿತಿ ಮಾಡಿ ಎಂದು ಕೇಳಿಲ್ಲ. ನಾನೇನು ಪ್ರಸ್ತಾಪ ಮಾಡಿದ್ದೇನೆಂದರೆ ಉನ್ನತ ಅಧಿಕಾರವಿರತಕ್ಕಂಥ ಒಂದು ಸರ್ಕಾರಿ ಸಮಿತಿ ಮಾಡಿ ಅದರಲ್ಲಿ ಎಕ್ಸ್‌ಪರ್ಟ್ಸ್ ಕೂಡ ಹಾಕಿ ಎಂದು ಹೇಳಿದ್ದೇನೆ. ಸುಮ್ಮನೆ ಇವತ್ತು ಚುನಾಯಿತ ಪ್ರತಿನಿಧಿಗಳೊಬ್ಬರೆ ಇದ್ದರೆ ಸಾಲದು, ಎಲ್ಲಾ ವಿಧದಲ್ಲಿ ತಿಳಿದುಕೊಂಡಿರತಕ್ಕಂಥ ಎಕ್ಸ್‌ಪರ್ಟ್ಸ್ ಕೂಡ ಇರಬೇಕಾಗುತ್ತದೆ. ಇವತ್ತು ತಮಗೆಲ್ಲಾ ತಿಳಿದಿರುವಂತೆ ಮದ್ಯವನ್ನು ಸರ್ಕಾರದವರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಜನರಿಗೆ ಸಪ್ಲೈ ಮಾಡುತ್ತಿದ್ದಾರೆ. ಸರ್ಕಾರದ ದೃಷ್ಟಿಯಲ್ಲಿ ಅವರು ಒಳ್ಳೆಯ ಮದ್ಯವನ್ನು ಸರಬರಾಜು ಮಾಡುತ್ತಿರಬಹುದು. ಸರ್ಕಾರ ಇದರ ಜವಾಬ್ದಾರಿಯನ್ನು ಹೊರಬೇಕು. ಜನಗಳ ರಕ್ಷಣೆಯನ್ನು ಮಾಡುವುದೂ ಸಹ ಸರ್ಕಾರದ ಕರ್ತವ್ಯ.....—

ಶ್ರೀ ಎಂ.ಪಿ. ಪ್ರಕಾಶ್.—ರೈತ ಸಂಘದ ಅಧ್ಯಕ್ಷರಾದ ಶ್ರೀಮಾನ್ ನಂಜುಂಡಸ್ವಾಮಿಯವರು ಬಟ್ಟಿ ಸಾರಾಯಿಯನ್ನು ಮನೆಯಲ್ಲಿ ಮಾಡಿಸಿದರೆ ಆರೋಗ್ಯಕ್ಕೆ ಒಳ್ಳೆಯದು ಎನ್ನುವ ವಾದ ಮಾಡಿದ್ದರು.....

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ದೇಶದಲ್ಲಿ ಇರುವುದು ಕಳ್ಳಬಟ್ಟಿ ಇಲ್ಲವೆ ಸರ್ಕಾರಿ ಮದ್ಯೆ ಎರಡು ಮಾತ್ರ ಇದೆ. ಸರ್ಕಾರಿ ಮದ್ಯದಲ್ಲಿ ಕ್ವಾಲಿಟಿ ಇರುವುದಿಲ್ಲ, ಕ್ವಾಂಟಿಟಿ ಸಹ ಇರುವುದಿಲ್ಲ. ಮದ್ಯ ತಯಾರು ಮಾಡುವುದಕ್ಕೆ ಸರ್ಕಾರ ಯಾರಿಗೆ ಅನುಮತಿ ಕೊಟ್ಟಿರುತ್ತಾರೋ ಅದು ಸರ್ಕಾರಿ ಮದ್ಯವಾಗುತ್ತದೆ, ಯಾರು ಅನುಮತಿ ಪಡೆಯದೆ ಮದ್ಯ ತಯಾರು ಮಾಡುತ್ತಾರೋ ಅದು ಕಳ್ಳಬಟ್ಟಿಯಾಗಿರುತ್ತದೆ. ಈಗ ಮನೆಯಲ್ಲಿಯೇ ಒಳ್ಳೆಯ ವೈನ್ ತಯಾರು ಮಾಡಿದರೂ ಸಹ ಅದು ಕಳ್ಳಬಟ್ಟಿಯಾಗುತ್ತದೆ. ಆದ್ದರಿಂದ ಸಮಗ್ರವಾಗಿ ತಿಳಿದುಕೊಂಡಿರತಕ್ಕಂಥ ಎಕ್ಸ್‌ಪರ್ಟ್ಸ್ ಈ ಕಮಿಟಿಯಲ್ಲಿರಬೇಕಾಗುತ್ತದೆ.

ಶ್ರೀ ಚಾಬಂರೆಡ್ಡಿ ವಿ. ತಂಗಳ್ --ಎಕ್ಸ್‌ಪರ್ಟ್ಸ್ ಅಂದರೆ ನಿಮ್ಮ ಅರ್ಥದಲ್ಲಿ ಯಾರು ಅನೇಕ ವರ್ಷಗಳಿಂದ ಬೇರೆ ಬೇರೆ ರೀತಿಯಲ್ಲಿ ವಂಧ್ಯೆಗಳನ್ನು ಸೇವನೆ ಮಾಡಿ ಅನುಭವಪಡೆದುಕೊಂಡಿರುತ್ತಾರೋ ಅಂತಹವರು ಎಕ್ಸ್‌ಪರ್ಟ್ಸ್ ಎಂದು ತೀರ್ಮಾನಿಸುತ್ತೀರೋ?

ಶ್ರೀ ಪಟವಂಕ್ಕಿ ರತ್ನಾಕರ್ --ಮಾನ್ಯ ಅಧ್ಯಕ್ಷಿಣಿಯವರೇ ಇವತ್ತು ಕಳ್ಳಬಟ್ಟಿ ಸಾರಾಯಿಯನ್ನು ವಂನೆಯಲ್ಲಿ ತಯಾರು ಮಾಡುವ ಉದ್ದೇಶವೇನೆಂದರೆ ಶುದ್ಧವಾದ ಸಾರಾಯಿ, ಹೆಂಡವನ್ನು ಕಡಿವೆ ರೇಟ್‌ನಲ್ಲಿ ಸರ್ಕಾರದವರು ಒದಗಿಸಿಕೊಡುತ್ತಿಲ್ಲ. ಆದ್ದರಿಂದ ಕಳ್ಳಬಟ್ಟಿ ಸಾರಾಯಿಯನ್ನು ಜನ ತಯಾರು ಮಾಡುತ್ತಾರೆ. ಇವತ್ತು ನೀವು ಒಂದು ಸೀಸೆ ಸಾರಾಯಿಗೆ ೭--೮ ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದೀರಿ. ಆ ಸಾರಾಯಿಯನ್ನು ಏಳು ಎಂಟು ರೂಪಾಯಿಗಳನ್ನು ಕೊಟ್ಟು ಕೊಂಡುಕೊಳ್ಳ ಬೇಕಾಗುತ್ತದೆ. ಏಳು ರೂಪಾಯಿಗಳನ್ನು ಕೊಟ್ಟು ಸಾರಾಯಿಯಂನ್ನು ಕುಡಿದರೂ ಸಹ ಮತ್ತು ಬರುವುದಿಲ್ಲ. ಆಗ, ಒಂದು ಕ್ವಾರ್ಟರ್ ಕುಡಿಯುವವನು ಎರಡು ಕ್ವಾರ್ಟರ್‌ಗಳನ್ನು ಕುಡಿಯಂ ಬೇಕಾಗುತ್ತದೆ. ಮತ್ತು ಬರಬೇಕಾದರೆ ಅವನು ಎರಡು ಬಾಟ್ಲ್ ಸಾರಾಯಿಯನ್ನು ಕುಡಿಯಬೇಕಾಗಂ ತ್ತದೆ. ಆದುದರಿಂದಲೇ ರೈತರ ಸಂಘದವರು ಸಾರಾಯಿ ಮಾಡುವುದಕ್ಕೆ ನಮಗೆ ಬಿಟ್ಟಾಬಿಡಿ. ನಾವೇ ಸರಿಯಾಗಿ ತಯಾರು ಮಾಡಿಕೊಳ್ಳುತ್ತೇವೆಂದು ಹೇಳಿರುವುದಂ. ಅವರು ವೈಜ್ಞಾನಿಕವಾಗಿ ತಯಾರು ಮಾಡಿಕೊಳ್ಳುತ್ತಾರೆ.

ಶ್ರೀ ಎಂ. ಪಿ. ಪ್ರಕಾಶ್.--ನಾನೂ ಸಹ ಅವರ ಪರವಾಗಿಯೇ ಹೇಳಿದ್ದುದಂ.

ಶ್ರೀ ಪಟವಂಕ್ಕಿ ರತ್ನಾಕರ.—ನೀವು ಮತ್ತು ಮಾನ್ಯ ಜಾಲಪ್ಪನವರಂ ಸರ್ಕಾರದ ಮೇಲೆ ಒತ್ತಡ ತಂದು, ಇನ್ನು ಮೇಲೆ ಕುಡಿಯುವವರೇ ಸಾರಾಯಿಯನ್ನು ತಯಾರು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ.

ಶ್ರೀ ಎಂ. ಪಿ. ಪ್ರಕಾಶ್.—ಶ್ರೀಮಾನ್ ಶ್ರೀನಿವಾಸ್‌ರವರು ಮದ್ಯಪಾನ ವಿರೋಧದ ಬಗ್ಗೆ ಒಂದು ನಿರ್ಣಯವನ್ನು ತಂದಿದ್ದಾರೆ. ಈಗ ಆ ಚರ್ಚೆಯಲ್ಲಿ ನಾವು ನೀವು ಭಾಗಿಗಳಾಗಿ ಮಾತನಾಡಂ ತ್ತಿದ್ದೇವೆ. ಮಂಂದಿನ ವಿಷಯದ ಬಗ್ಗೆ ಈಗ ಚರ್ಚೆ ಮಾಡುವುದಂ ಬೇಡ.

ಶ್ರೀ ಪಟವಂಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರಂಗಳು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಇದರ ಬಗ್ಗೆ ಇನ್ನು ಹೆಚ್ಚಿಗೆ ಹೇಳುವ ಅವಶ್ಯಕತೆ ಇಲ್ಲವೆಂದಂ ನಾನಂ ಭಾವಿಸುತ್ತೇನೆ. ಎಲ್ಲಾ ಮಾನ್ಯ ಸದಸ್ಯರುಗಳು ಈ ನಿರ್ಣಯದ ಬಗ್ಗೆ ತಮ್ಮ ಸದ್ಭಾವನೆಯನ್ನು ಮತ್ತು ಒಳ್ಳೆಯ ವಿಚಾರಗಳನ್ನು, ಈ ಸದನದಲ್ಲಿ ಹೇಳಿದ್ದಾರೆ. ಆದ್ದರಿಂದ ಈ ನಿರ್ಣಯವನ್ನು ನಾನಂ ಬೆಂಬಲಿಸುತ್ತೇನೆ ಹಾಗೂ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತವಂಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಂಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದ ಹಿರಿಯ ಸದಸ್ಯರಾದಂಥ ಮಾನ್ಯ ಶ್ರೀನಿವಾಸ್‌ರವರು ಯಾವ ಒಂದು ಮದ್ಯಪಾನ ನಿಷೇಧದ ಖಾಸಗಿ ನಿರ್ಣಯವನ್ನು ತಂದಿದ್ದಾರೆ. ಇದು ನಿಜಕ್ಕೂ ಸಹ ಚಿಂತನೆ ಮಾಡಬೇಕಾದಂಥ ವಿಷಯಂ. ಈ ರಾಜ್ಯದಲ್ಲಿ, ಈ ದೇಶದಲ್ಲಿ ಕಡು ಬಡವರೂ ಸಹ ಮದ್ಯಪಾನದ ದುಶ್ಚಟಕ್ಕೆ ಬಲಿಯಾಗಿದ್ದಾರೆ. ಈ ದುಶ್ಚಟವನ್ನು ಜನರಿಂದ ಬಿಡಿಸುವುದಕ್ಕೆ ಮತ್ತು ಅದರಿಂದ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ನಾವು ಯೋಚನೆ ಮಾಡಬೇಕಾಗುತ್ತದೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಹಾತ್ಮ ಗಾಂಧೀಜಿಯವರು ಏನು ಹೇಳಿದ್ದರು ಎಂದರೆ, ನಮ್ಮ ದೇಶದ ಜನರು ಮದ್ಯಪಾನ ದುಶ್ಚಟಕ್ಕೆ ಬಲಿಯಾಗಬಾರದು, ಮದ್ಯಪಾನ ದುಶ್ಚಟಕ್ಕೆ ಬಲಿಯಾದರೆ ದೇಶ ಬಡತನವಾಗುತ್ತದೆ ಎಂದು. ಮದ್ಯಪಾನ ಮಾಡುವುದನ್ನು ಜನರು ಕಲಿತರೆ ಅವರುಗಳು ನಿರ್ಗತಿಕರಾಗುವ ಸಂಭವ ಉಂಟು. ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಮದ್ಯಪಾನದ ಕಟ್ಟಾ ವಿರೋಧಿ ಗಳಾಗಿದ್ದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಮದ್ಯಪಾನದ ಹಾವಳಿ ಇನ್ನೂ ಜಾಸ್ತಿ ಆಗಿಹೋಯಿತು. ಇದರ ಬಗ್ಗೆ ಸರ್ಕಾರದವರು ಮೊದಲೇ ಚಿಂತನೆ ಮಾಡಿದ್ದಿದ್ದರೆ ಇಷ್ಟೊಂದು

ದುಃಸ್ಥಿತಿಗೆ ದೇಶ ಬರುತ್ತಿರಲಿಲ್ಲ. ಈಗಲಾದರೂ ಸರ್ಕಾರದವರು ಈ ಕಡೆ ಗಮನ ಹರಿಸಿ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಮದ್ಯಪಾನವನ್ನು ನಿಷೇಧ ಮಾಡಬೇಕು. ಇವೊತ್ತಿನ ನಮ್ಮ ಸಮಾಜದಲ್ಲಿ ಕಡು ಬಡವರು ಬಹಳ ಜನ ಇದ್ದಾರೆ. ಇವರುಗಳಿಗೆ ಕೊಡುವ ಕೂಲಿಯಿಂದ ಅವರ ಹೊಟ್ಟೆ ತುಂಬುವುದಿಲ್ಲ. ಕೂಲಿಯನ್ನು ಪಡೆದ ಜನ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಮದ್ಯಪಾನ ಮಾಡುತ್ತಾರೆ. ಇದು ನಿಜವಾಗಿಯೂ ಕರುಣಾಜನಕವಾದ ಪರಿಸ್ಥಿತಿ. ಇದರ ಬಗ್ಗೆ ಸರ್ಕಾರ ಪ್ರಮಾಣಿಕವಾಗಿ ಚಿಂತನೆ ಮಾಡಬೇಕು. ಆದರೆ ಜನತಾ ಸರ್ಕಾರ ಬಂದ ಮೇಲೆ ಇದರ ಬಗ್ಗೆ ಚಿಂತನೆ ಮಾಡುವುದನ್ನು ಬಿಟ್ಟು, ಊರು ಊರುಗಳಲ್ಲಿ, ಕೇರಿ ಕೇರಿಗಳಲ್ಲಿ, ದೇವಸ್ಥಾನ ಎಲ್ಲಿ ಇದೆ, ಶಾಲೆಗಳು ಎಲ್ಲಿ ಇದೆ, ಆಸ್ಪತ್ರೆಗಳು ಎಲ್ಲಿ ಇವೆ ಎಂಬುದನ್ನು ನೋಡದೇ ಎಲ್ಲಾ ಕಡೆಗಳಲ್ಲೂ ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಹೆಂಡ ಸಾರಾಯಿ ಅಂಗಡಿಗಳಿಗೆ ಪರ್ಮಿಷನ್ ಕೊಟ್ಟಿದ್ದೀರಿ. ಗೌರವಸ್ಥರು ಸಾಯಂಕಾಲದ ಮೇಲೆ ಏನಾದರೂ ಕೆಲಸ ಇದ್ದರೂ ಸಹ ಓಡಾಡುವುದಕ್ಕೆ ಆಗದೇ ಇದ್ದಂಥ ಸ್ಥಿತಿ ಬಂದಿದೆ. ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳಾದ ನಾವು ಹೆಂಡ, ಸಾರಾಯಿ ಮುಂತಾದ್ದನ್ನು ಅವನ ಆಪೇಕ್ಷೆಗೆ ವಿರುದ್ಧ ಕೊಡಿಸಿ ಅವನು ಪಾನಮತ್ತನಾದಮೇಲೆ ಅವನ ಓಟನ್ನು ಕೊಂಡುಕೊಳ್ಳತಕ್ಕ ಪ್ರವೃತ್ತಿಯನ್ನು ಸ್ವಾತಂತ್ರ್ಯ ಬಂದ ಳಿ ವರ್ಷಗಳಿಂದಲೂ ಬೆಳೆಸಿಕೊಂಡು ಬಂದಿದ್ದೇವೆ. ಇದರ ಪರಿಣಾಮದಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕಡು ಬಡವರು ಅತ್ಯಂತ ಘೋರ ಕಷ್ಟವನ್ನು ಅನುಭವಿಸಬೇಕಾಗಿ ಬಂದಿದೆ. ಇದರ ಬಗ್ಗೆ ನಾವು ತುಂಬಾ ಚಿಂತನೆಯನ್ನು ಮಾಡಬೇಕಾಗಿದೆ. ಈ ದುಷ್ಪರಿಣಾಮದ ವಿರುದ್ಧ ನಾವು ಪ್ರಾಮಾಣಿಕ ಪ್ರಯತ್ನಮಾಡಿ ಅದನ್ನು ಹೋಗಲಾಡಿಸುವ ಯೋಚನೆಯನ್ನು ಮಾಡಬೇಕಾಗಿದೆ. ಒಂದೇಸಾರಿ ಪಾನ ನಿಷೇಧವನ್ನು ಮಾಡುವುದಕ್ಕೆ ಆಗದೇ ಇರಬಹುದು. ಈ ಸಮಸ್ಯೆಯನ್ನು ನಾವು ಸಂಪೂರ್ಣವಾಗಿ ಬಗೆಹರಿಸಬಲ್ಲೆವೆಂದು ಅಂದುಕೊಂಡಿಲ್ಲ. ಆದರೆ ಯಾರಿಗೆ ಕುಡಿತದ ಬಗ್ಗೆ ಆಪೇಕ್ಷೆ ಇದೆ ಅಂಥವರು ಕೊಂಡುಕೊಂಡು ಕುಡಿಯಲಿ. ಆದರೆ ಯಾರು ಕಡು ಬಡವರಿದ್ದಾರೆ ಅವರು ಕುಡಿಯುವುದಕ್ಕೆ ನೀರು ಸಿಕ್ಕದಿದ್ದರೂ ಬಹಳ ಸುಲಭವಾಗಿ ಹೆಂಡ, ಸಾರಾಯಿ, ಮುಂತಾದವುವನ್ನು ಒದಗಿಸಿಕೊಡುವ ವ್ಯವಸ್ಥೆಯ ಕಡೆಗೆ ನಾವು ಗಮನಹರಿಸುತ್ತಿದ್ದೇವೆ ಕೇವಲ ಸರ್ಕಾರಕ್ಕೆ ಹಣ ಬರುತ್ತದೆಂಬ ಕಾರಣದಿಂದಾಗಿ ನಾವು ಈ ರೀತಿ ಹೆಂಡ, ಸಾರಾಯಿ ಒದಗಿಸುವ ಕಡೆಗೆ ಮನಸ್ಸು ಕೊಡುತ್ತಿರುವುದು ಸರಿಯೆ ? ಇದೇ ರೀತಿಯಲ್ಲಿ ನಾವು ಹೋಗುವುದಾದರೆ ಈ ಸಮಾಜದಲ್ಲಿ ನಾವು ಬದಲಾವಣೆಯನ್ನು ತರುವುದಕ್ಕೆ ಸಾಧ್ಯವೆ ? ಈ ಕುಡಿತದ ಪರಿಣಾಮದಿಂದಾಗಿ ಸಾವಿರಾರು ಕುಟುಂಬಗಳು ಗ್ರಾಮಾಂತರ ಪ್ರದೇಶದಲ್ಲಿ ಹಾಳಾಗಿ ಹೋಗುತ್ತಿವೆ ದಿನಕ್ಕೆ ೭–೮ ರೂಪಾಯಿ ಕೂಲಿ ಮಾಡಿ ಹಣ ಸಂಪಾದನೆ ಮಾಡತಕ್ಕ ಕೂಲಿಗಾರ ಯಾರಿದ್ದಾನೆ ಅವನು ಮನೆಗೆ ಸಂಜೆ ವಾಪಸ್ಸು ಹೋಗುವಾಗ ಚೆನ್ನಾಗಿ ಕುಡಿದು ಮನೆಗೆ ಹೋದಕೂಡಲೇ ಅಲ್ಲಿನ ಸಮಸ್ಯೆಗಳನ್ನೆಲ್ಲಾ ನೋಡಿ ಬಗೆಹರಿಸಿಕೊಳ್ಳಲು ಸಾಧ್ಯ ಇಲ್ಲದೆ ಹೆಂಡತಿ ಮಕ್ಕಳನ್ನು ಸಿಕ್ಕಾಪಟ್ಟೆ ಹೊಡೆದು ಬಡಿದು ಮಾಡುವುದರ ಜೊತೆಗೆ ಹೆಂಡತಿಯ ಕೊರಳಲ್ಲಿರತಕ್ಕ ತಾಳಿಯನ್ನೂ ಕೂಡ ಕಿತ್ತುಕೊಂಡು, ದೇವರ ಗೂಡಿನಲ್ಲಿ ಅಲ್ಪ ಸ್ವಲ್ಪ ಹಣವನ್ನು ತೆಗೆದಿಟ್ಟು ಜೋಳವನ್ನೋ, ರಾಗಿಯನ್ನೋ ತರಬೇಕೆಂದಿದ್ದರಲ್ಲಿ ಆ ಹಣವನ್ನೂ ತೆಗೆದುಕೊಂಡು ಹೋಗಿ ಮತ್ತೆ ಅದಕ್ಕೂ ಕುಡಿದು ಬರುತ್ತಿದ್ದಾರೆ. ಅಷ್ಟೇ ಅಲ್ಲ, ದಿನ ಬೆಳಗಾದರೆ ನಡೆಯತಕ್ಕ ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ ಮುಂತಾದವು ಏನು ನಡೆಯುತ್ತಿವೆ ಇವೆಲ್ಲಕ್ಕೂ ಕಾರಣ ನಮಗೆಲ್ಲಾ ಗೊತ್ತಿರುವಂತೆ ಈ ಮದ್ಯಪಾನ ಎಂದು ಹೇಳಿದರೆ, ತಪ್ಪಾಗಲಿಕ್ಕಿಲ್ಲ. ಇಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಇದರ ಬಗ್ಗೆ ಚಿಂತನೆಯನ್ನು ಮಾಡಿ ಮದ್ಯಪಾನವನ್ನು ಕೊನೆಗೊಳಿಸಿ, ಕಡು ಬಡವರ ಜೀವನವನ್ನು ಉತ್ತಮ ದೃಷ್ಟಿಯಿಂದ, ದುಶ್ಚಟವನ್ನು ದೂರ ಮಾಡಲು ಯೋಚನೆ ಮಾಡಿ ಇವತ್ತು ಈ ನಿರ್ಣಯವನ್ನು ಏನು ಸಭೆಯ ಮುಂದೆ ತಂದಿದ್ದಾರೆ ಇದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಇದು ಕೇವಲ ಖಾಸಗೀ ನಿರ್ಣಯ, ಸದನದ ಮುಂದೆ ಬಂದಿರುವುದರಿಂದ ಇದರ ಬಗ್ಗೆ ನಾನೂ ಒಂದೆರಡು ಮಾತನಾಡಿದರಾಯಿತು ಎಂಬ ಭಾವನೆ ನನಗಿಲ್ಲ. ಈ ಗಂಭೀರ ನಿರ್ಣಯದ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಿ ಪ್ರಾಮಾಣಿಕ ಪ್ರಯತ್ನವಾದರೆ ಈ ರಾಜ್ಯದಲ್ಲಿರತಕ್ಕ ಕಡು ಬಡವರ ಮೇಲೆ ಅವರ ಕುಟುಂಬದಮೇಲೆ ಏನೊಂದು ದುಷ್ಪರಿಣಾಮ ಉಂಟಾಗುತ್ತಿದೆ ಅದು ಆಗಬಾರದು, ಏನಾದರೂ ಮಾಡಿ ಅದನ್ನು ದೂರಮಾಡಬೇಕೆಂಬ ದೃಷ್ಟಿಯಿಂದ

ಇದನ್ನು ಇಲ್ಲಿ ತಂದಿದ್ದಾರೆ. ಅನೇಕ ರಾಜ್ಯಗಳಲ್ಲಿ ವಿಚಾರಣಾ ಆಯೋಗಗಳನ್ನು ಮಾಡಿದ್ದಾರೆ, ತಜ್ಞರುಗಳ ಸಮಿತಿಗಳನ್ನು ನೇಮಕಮಾಡಿದ್ದಾರೆ. ಅವರೆಲ್ಲರೂ ಉತ್ತಮ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆಷ್ಟೇ ಅಲ್ಲ ಇದರಲ್ಲಿ ಸಾತಷ್ಟು ನೊಂದು ಬೆಂದಿರತಕ್ಕ ಜನರೂ ಕೂಡ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಇವೆಲ್ಲವುಗಳ ಆಧಾರವನ್ನು ಗಮನದಲ್ಲಿಟ್ಟುಕೊಂಡು ದುಶ್ಚಟಕ್ಕೆ ಬಲಿಯಾಗಿರತಕ್ಕ ಕಡು ಬಡವರನ್ನು ಅಲ್ಲಿಂದ ಪಾರು ಮಾಡುವ ಬಗ್ಗೆ ಯೋಚನೆ ಮಾಡಬೇಕು. ನಮ್ಮ ರಾಜ್ಯಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ಹಣ ಬರುತ್ತದೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಕೆಲವು ಕೆರೆಗಳ ಕೆಲಸವನ್ನು ನಿಲ್ಲಿಸಿದರೂ ಪರವಾಗಿಲ್ಲ, ಶಾಲಾ ಕಟ್ಟಡಗಳನ್ನು ಕಟ್ಟಿಸುವುದನ್ನು ನಿಲ್ಲಿಸಿದರೂ ಪರವಾಗಿಲ್ಲ, ಯಾರು ಕಡು ಬಡವರು ಹೆಂಡ ಸಾರಾಯಿ ಕುಡಿದುಕೊಂಡು ಮನೆಗಳಿಗೆ ಹೋಗಿ ಹೆಂಡತಿ ಮಕ್ಕಳನ್ನು ಹೊಡೆದು, ಬಡಿದು ಅವರನ್ನು ನಿರ್ಗತಿಕರನ್ನಾಗಿ ಮಾಡಿ ಮನೆಯಿಂದ ಹೊರಗೆ ಓಡಿಸಿ ಬೀದಿ ಭಿಕಾರಿಗಳನ್ನಾಗಿ ಮಾಡುತ್ತಾರೆ ಅಂಥವರನ್ನು ರಕ್ಷಣೆ ಮಾಡತಕ್ಕ ಕೆಲಸ ಮಾಡಬೇಕಾಗಿದೆ. ಪಾನದ ದುಶ್ಚಟಕ್ಕೆ ಅವರು ಬಲಿಯಾಗದಂತೆ ನೋಡಿಕೊಳ್ಳಬೇಕಾದ್ದು ಸರ್ಕಾರದ ಕರ್ತವ್ಯ. ತಾನು ಮದ್ಯವನ್ನು ಕುಡಿಯದೆ ಇದ್ದರೆ ಬದುಕುವುದೇ ಇಲ್ಲ, ನಾನು ಇದರಿಂದಲೇ ಬದುಕಿದ್ದೇನೆ ಅದ್ದರಿಂದ ನನಗೆ ಇದು ಬೇಕೇ ಬೇಕು ಎನ್ನೋವ ಮನುಷ್ಯ ಬೇಕಾದರೆ ಹೋಗಿ ಕುಡಿದು ಬರಲಿ. ಆದರೆ ಕೈಯಲ್ಲಿ ೫-೦೦ ರೂಪಾಯಿ ಇದೆಯೆಂದ ಕೂಡಲೇ ಹೋಗಿ ಕುಡಿದುಬಂದು ಹೆಂಡತಿ ಮಕ್ಕಳನ್ನು ಸಿಕ್ಕಾಪಟ್ಟೆ ಹೊಡೆದು, ಬಡಿದು, ಹೆಂಡತಿಯ ಕೊರಳಲ್ಲಿರುವ ತಾಳಿಯನ್ನು ಕಿತ್ತುಕೊಂಡು ಹೋಗಿ ಅದಕ್ಕೂ ಕುಡಿದು ಬರುವಂಥ ವ್ಯಕ್ತಿಗಳ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಏನೊಂದು ನಿರ್ಣಯವನ್ನು ಸಭೆಯ ಮುಂದೆ ಪ್ರಸ್ತಾಪಿಸಿದ್ದಾರೆ ಇದಕ್ಕೆ ಸಂಬಂಧ ಪಟ್ಟಂತೆ ಕೇವಲ ಸದನದ ಸಮಿತಿಯನ್ನು ನೇಮಕ ಮಾಡುವುದು ಮಾತ್ರವಲ್ಲ. ಆಯೋಗಗಳು ಕೊಟ್ಟಿರತಕ್ಕ ವರದಿ, ಅಧಿಕಾರ ವರ್ಗದವರ ಸಹಾಯ, ತಜ್ಞರ ಸಲಹೆ ಸೂಚನೆ ಇವೆಲ್ಲವನ್ನೂ ಕ್ರೋಢೀಕರಿಸಿಕೊಂಡು ಯಾರು ಈ ದುಶ್ಚಟಕ್ಕೆ ಬಲಿಯಾಗಿದ್ದಾರೆ ಅವರನ್ನು ಅದರಿಂದ ಪಾರು ಮಾಡುವ ದಿಸೆಯಲ್ಲಿ ಸುದೀರ್ಘ ಚರ್ಚೆ ಮತ್ತು ಕಾರ್ಯಾಚರಣೆ ಅವಶ್ಯಕವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಮಗೆ ಸ್ವಾತಂತ್ರ್ಯ ಬಂದ ೪೦ ವರ್ಷಗಳ ನಂತರವಾದರೂ ಇಂಥ ಒಂದು ಮಹತ್ವದ ಆಮೂಲ್ಯವಾದ ನಿರ್ಣಯವನ್ನು ಸದನದ ಮುಂದೆ ಮಂಡಿಸುವುದರ ಮೂಲಕ ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಬಹಳ ಉತ್ತಮ ಕೆಲಸವನ್ನು ಮಾಡಿದ್ದಾರೆ. ಹೆಂಡ ಸಾರಾಯಿಯಂ ದುಷ್ಪರಿಣಾಮ ಶ್ರೀಸಾಮಾನ್ಯನ ಕಾಟುಂಬದ ಅವನತಿಗೆ ಕಾರಣವಾಗಿದೆ ಅದನ್ನು ದೂರಮಾಡಿ ಅವನೂ ಮತ್ತು ಅವನ ಕುಟುಂಬ ನಮ್ಮಂತೆಯೇ ಸಮಾಜದಲ್ಲಿ ಶಾಂತಿ ನೆಮ್ಮದಿ ಹಾಗೂ ಗೌರವದಿಂದ ಜೀವನ ಸಡೆಸುವಂತಾಗಲು ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿದೆಯೆಂದು ಹೇಳಿ ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಸದನದ ಮುಂದೆ ಮಂಡಿಸಿರತಕ್ಕ ಈ ಖಾಸಗೀ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ಕೊಡುತ್ತಾ ಅವರು ಏನೊಂದು ಮಹದಾಕಾಂಕ್ಷೆಯನ್ನು ಇದರಲ್ಲಿ ವ್ಯಕ್ತಪಡಿಸಿದ್ದಾರೆ ಅದನ್ನು ಪೂರೈಸುವುದರಲ್ಲಿ ಅವರು ಸಫಲರಾಗಲೆಂದು ತಿಳಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯ ಶ್ರೀನಿವಾಸರವರು ತಂದಿರುವ ಖಾಸಗಿ ನಿರ್ಣಯವನ್ನು ಬೆಂಬಲಿಸಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಈ ಮದ್ಯಪಾನ ನಿಷೇಧದ ಬಗ್ಗೆ ಹೇಳುತ್ತಾ ಹೋದರೆ ಬಹಳ. ಮದ್ಯಪಾನ ಎನ್ನುವುದು ಈಗಾಗಲೇ ಹೆಚ್ಚು ಜನ ಉಪಯೋಗಿಸತಕ್ಕ ವಸ್ತುವಾಗಿದೆ. ಇತ್ತೀಚಿನ ದಿನಗಳಲ್ಲಿ ಚಿಕ್ಕವರು ದೊಡ್ಡವರಂ ಹೆಂಗಸರು ಗಂಡಸರು ವ್ಯತ್ಯಾಸ ಇಲ್ಲದೆ ಇದನ್ನು ಉಪಯೋಗಿಸುತ್ತಾರೆ. ಆದರೆ ಹಿಂದೆ ಹೆಂಡ ಎಂದರೆ ಅರ್ಥ ಇರುತ್ತಿತ್ತು. ಈಚಲು ಮರದಿಂದ ತೆಗೆದಂಥ ಒಂದು ಹಾಲು ಹೆಂಡವಾಗಿ ಮಾರ್ಪಾಡು ವಾಗುತ್ತಿತ್ತು. ಆದರೆ ಈಗ ಆ ರೀತಿ ಇಲ್ಲ. ಹೆಂಡ ಅಂದರೆ ನೀರಿನಲ್ಲಿ ಕ್ಲೋರಲ್ ಹೈಡ್ರೇಟ್ ಎನ್ನುವ ಪುಡಿಯನ್ನು ಬೆರೆಸಿ ಬಾಟಲಿನಲ್ಲಿ ತುಂಬಿ ಕೊಡುತ್ತಿದ್ದಾರೆ. ಆ ಹೆಂಡಕ್ಕೂ ಈ ಹೆಂಡಕ್ಕೂ ವ್ಯತ್ಯಾಸ ಇದೆ. ಆ ಹೆಂಡ ಕುಡಿದವರೆ ಮತ್ತು ಬಂದು ಆರೋಗ್ಯ ಇರುತ್ತಿತ್ತು. ಈಗಿನದನ್ನು

ಕುಡಿದರೆ ಆರೋಗ್ಯಕ್ಕೆ ಧಕ್ಕೆ ಆಗುತ್ತದೆ. ಇದೆಲ್ಲಾ ಎಲ್ಲರಿಗೂ ಗೊತ್ತಿದ್ದು, ಗೊತ್ತಿಲ್ಲದೇ ನಡೆಯುವುದೇನಲ್ಲ, ಸರ್ಕಾರಕ್ಕೂ ಗೊತ್ತಿದೆ, ಜನಕ್ಕೂ ಗೊತ್ತಿದೆ, ಆದರೂ ಇದನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇದನ್ನೆಲ್ಲಾ ಕಂಡು ನಮ್ಮ ಶ್ರೀನಿವಾಸರವರು ಈ ಹೆಂಡವನ್ನು ಪೂರ್ತಿ ತೆಗೆದಂಹಾಕ ಬೇಕೆಂದು ಅಲ್ಲದಿದ್ದರೂ ಅದರ ಬಗ್ಗೆ ಸೂಕ್ತ ಶಿಫಾರಸನ್ನು ಮಾಡಲು ವಿಧಾನಮಂಡಲದ ಉನ್ನತ ಸಮಿತಿಯೊಂದನ್ನು ನೇಮಕ ಮಾಡಬೇಕೆಂದಿದ್ದಾರೆ. ಇದರಿಂದೇನಾದರೂ ಮಾರ್ಪಾಟು ಮಾಡಲು ಸಾಧ್ಯವಾಗುವುದೇನೋ. ಕೆಲವರಿಗೆ ಇದು ಅಗತ್ಯ. ಅಂಥವರಿಗೆ ಸರಿಯಾದ ಮದ್ಯಪಾನ ಕೊಡುವುದು ತಪ್ಪೇನಲ್ಲ. ಆದರೆ ಈಗಿನ ರೀತಿ ಹೇಗಿದೆ ಎಂದರೆ ಸರ್ಕಾರ ಎಲ್ಲೋ ಹರಾಜು ಮಾಡುತ್ತದೆ, ಯಾರೋ ಗುತ್ತಿಗೆದಾರರು ಬಿಡ್ ಕೂಗುತ್ತಾರೆ ಅವರಿಗೆ ಸಿಗುತ್ತದೆ, ಕೊನೆಗೆ ಅವರು ಬಾಟಲಿಯಲ್ಲಿ ತುಂಬಿ ಇಟ್ಟುಬಿಡುತ್ತಾರೆ, ಆದರಲ್ಲೇನು ನೊಣ ಬಿತ್ತೋ ಇರುವೆ ಬಿತ್ತೋ ಗೊತ್ತಿಲ್ಲ, ಏಕೆಂದರೆ ಬಿರಡೆಯನ್ನು ಮುಚ್ಚಿರುವುದಿಲ್ಲ. ಕುಡಿಯ ತಕ್ಕ ಸ್ಥಳ ಕೂಡ ಸ್ವಚ್ಛವಾಗಿರುವುದಿಲ್ಲ. ನಮ್ಮ ಸರ್ಕಾರಕ್ಕೆ ಅದರಿಂದ ಆದಾಯ ಬರುವುದು ೨೫೭ ಕೋಟಿ. ಖರ್ಚು ಹೆಚ್ಚೂಕಡಿಮೆ ೧೫ ಕೋಟಿ ಸರ್ಕಾರಕ್ಕೆ ಖರ್ಚಾಗಿ ೨೨೦ ಕೋಟಿ ಉಳಿಯುತ್ತದೆ. ಆದರೆ ಸರ್ಕಾರಕ್ಕೆ ಇಷ್ಟು ಹಣ ಬರುವ ಬಾಬ್ತಿಗೆ ಹೇಗೆ ವ್ಯವಸ್ಥೆ ಮಾಡಬೇಕು, ಜನಗಳ ಆರೋಗ್ಯ ಹೇಗೆ ಸುಧಾರಿಸಬೇಕು ಎಂಬ ಬಗ್ಗೆ ಯಾವ ಯೋಚನೆಯೂ ಇಲ್ಲ. ವರ್ಷಕ್ಕೊಂದು ಸಲ ಹರಾಜು ಆಗುವುದು, ಹರಾಜಿನಲ್ಲಿ ಹಣ ತೆಗೆದು ಕೊಳ್ಳುವುದು, ಹರಾಜು ತೆಗೆದುಕೊಂಡವನು ಅದರಲ್ಲಿ ಸಂಪಾದನೆ ಮಾಡುವುದು. ಎಷ್ಟೆಷ್ಟು ಸಂಪಾದನೆ ಮಾಡುತ್ತಿದ್ದಾರೆಂಬುದು ಅವರಿಗೇ ಗೊತ್ತು.

೬–೦೦ ಪಿ. ಎಂ.

ಇವತ್ತು ಮದ್ಯಪಾನವೆನ್ನುವುದಕ್ಕೆ ಸರಿಯಾದಂತಹ ವ್ಯವಸ್ಥೆ ಇಲ್ಲ. ಹಿಂದೆ ದೊಡ್ಡವರೆಲ್ಲಾ ಅಂದರೆ ರಾಜ ಮಹಾರಾಜರೆಲ್ಲರೂ ಕುಡಿಯುತ್ತಿದ್ದರು ಆ ಮಟ್ಟಕ್ಕೆ ಇವತ್ತು ಇಲ್ಲದಿದ್ದರೂ ಕೂಡ ನಮ್ಮ ರಾಜ್ಯದಲ್ಲಿ ಈ ಒಂದು ಗಲೀಜಾಗಿರತಕ್ಕಂತಹ ಅಥವಾ ಅದನ್ನು ಕುಡಿದು ಕರಳುಬೇನೆ ಮುಂತಾದ ರೋಗಗಳಿಗೆ ತುತ್ತಾಗಿ ಅವರ ಆರೋಗ್ಯವನ್ನು ಕೆಡಿಸಿಕೊಂಡು ತೊಂದರೆಗೆ ಒಳಗಾಗತಕ್ಕಂತಹ ಜನರನ್ನು ನಾವು ಕಾಣುತ್ತಿದ್ದೇವೆ. ಇಂತಹ ಒಂದು ಪರಿಸ್ಥಿತಿಯನ್ನು ತಪ್ಪಿಸುವುದು ಸರಕಾರದ ಆದ್ಯ ಕರ್ತವ್ಯ ಮತ್ತು ಸರಕಾರದ ಆದ್ಯ ಜವಾಬ್ದಾರಿಯೂ ಕೂಡ ಆಗಿದೆ. ಈ ರೀತಿಯಾದ ಒಂದು ಪರಿಸ್ಥಿತಿಯಿಂದ ನಮ್ಮ ಜನರಿಗೆ ತೊಂದರೆಯಾಗುತ್ತಿದೆ ಎಂದರೆ ಎಷ್ಟೇ ಹಣ ಬರಲೀ ಮದ್ಯಪಾನ ನಿಲ್ಲಿಸುವುದಕ್ಕೆ ಆನೇಕ ತೊಂದರೆಗಳು ಇವತ್ತು ನಮಗೆ ಎದುರಾಗಬಹುದು ಈ ವ್ಯವಸ್ಥೆಯಿಂದ ಸುಮಾರು ಶೇ.೦೦೧ ಜನ ಕೆಲಸಗಾರರಿಗೆ ಕೆಲಸ ಸಿಕ್ಕುವೇ ಇರತಕ್ಕಂತಹ ಸಂದರ್ಭ ಬರಬಹುದು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಅದರಿಂದ ೨೨೦ ಕೋಟಿ ರೂಪಾಯಿಗಳ ಆದಾಯ ಬರಬಹುದು. ಕೆಲಸಗಾರರಿಗೆ ಕೆಲಸ ಸಿಗುತ್ತದೆ ಯಾವ ತೊಂದರೆಯೂ ಇಲ್ಲದೇ ಆದಾಯ ಬರುತ್ತದೆ ಇದನ್ನು ತಕ್ಷಣ ನಿಲ್ಲಿಸಿದರೆ ಎಡಕ್ಕೂ ತೊಂದರೆ ಯಾಗುತ್ತದೆ ಆದ್ದರಿಂದ ಒಂದು ಸುವ್ಯವಸ್ಥಿತವಾದಂತಹ ಒಂದು ವ್ಯವಸ್ಥೆಯಲ್ಲಿ ಈ ಮದ್ಯಪಾನವನ್ನು ವಿರೋಧ ಮಾಡುವ ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನೀತಿ ಹಾಗೂ ವ್ಯವಸ್ಥೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಒಂದು ಸಮಿತಿಯನ್ನು ನೇಮಿಸುವ ಕೆಂಬ ಒಂದು ಖಾಸಗೀ ನಿರ್ಣಯವನ್ನು ಮಾನ್ಯ ಶ್ರೀನಿವಾಸರವರು ಏನು ತಂದಿದ್ದಾರೆ ಅದನ್ನು ಮಾಡಬೇಕು. ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಮದ್ಯಪಾನವನ್ನು ನಿಲ್ಲಿಸಿ ಆ ರಾಜ್ಯದ ಆರ್ಥಿಕ ವ್ಯವಸ್ಥೆ ಮತ್ತು ಅಲ್ಲಿರತಕ್ಕಂತಹ ಜನರ ಸ್ಥಿತಿ ಗತಿಯನ್ನು ನಾವು ಯೋಚನೆ ಮಾಡಿದಾಗ ಅವರು ಯಾವ ರೀತಿ ಮುಂದುವರಿಸಿಕೊಂಡು ಬರುತ್ತಿದ್ದಾರೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ನಾವು ಒಂದೇ ಸಲ ಇಲ್ಲಿ ಮದ್ಯಪಾನವನ್ನು ನಿಲ್ಲಿಸಿದರೆ ಬಟ್ಟಿ ಸಾರಾಯಿ ಕುಡಿಯುವುದಂತೂ ನಿಜ. ಈಗಲೂ ಕೂಡ ಕೆಲವು ಮನೆಗಳಲ್ಲಿ ಬಟ್ಟಿ ಸಾರಾಯಿ ಮಾಡುತ್ತಾರೆ. ಇನ್ನೂ ಕೆಲವು ಮನೆಗಳಲ್ಲಿ ವ್ಯವಸ್ಥಿತವಾದಂತಹ ಬಟ್ಟಿ ಸಾರಾಯಿ ಮಾಡುವುದನ್ನು ಕಾಣಬಹುದು ಆದರೆ ಬಟ್ಟಿ ಸಾರಾಯಿ ಕಾಯಿಸುವುದಾದರೆ ಹಳೆಯ ಬೆಲ್ಲ ಮತ್ತು ಅತಿತಹ ವಸ್ತುಗಳನ್ನು, ಯಾವುದು ಆರೋಗ್ಯಕ್ಕೆ ಧಕ್ಕೆ ತರತಕ್ಕಂತಹ ವಸ್ತುಗಳನ್ನು ಹಾಕಿ ಬಟ್ಟಿ ಸಾರಾಯಿ ಕಾಸತಕ್ಕಂತಹ ವ್ಯವಸ್ಥೆ ಇದೆ. ಅಂಥಾದ್ದನ್ನು ಕುಡಿದರೆ ಇನ್ನೂ ಕೂಡ ಹೆಚ್ಚು ತೊಂದರೆಯಾಗುತ್ತದೆ. ನಾವು ಈ ಎರಡನ್ನೂ ಯೋಚನೆ ಮಾಡಬೇಕಾಗುತ್ತದೆ. ಇದನ್ನು ಪೂರ್ತಿಯಾಗಿ ನಿಲುಗಡೆ ಮಾಡಿದ ಜನರಿಗೆ ಮದ್ಯಪಾನವನ್ನು ಕುಡಿಯದಿದ್ದರೂ ಕೂಡ ಬಟ್ಟಿ

ಸಾರಾಯಿಂಗೆ ಮಾರು ಹೋಗುತ್ತಾರೆ ಆ ರೀತಿಯಾಗಿ ಮಾರು ಹೋದರೆ ಭಟ್ಟಿ ಸಾರಾಯಿ ಮಂಠಾದವನ್ನು ಮನುಷ್ಯನು ಕುಡಿಯುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂತಹ ರೀತಿಯಲ್ಲಿ ತಯಾರು ಮಾಡುತ್ತಾರೆ. ಬೆಂಗಳೂರಿನಲ್ಲಿ ಕೂಡ ಇದನ್ನು ನೋಡಿದ್ದೇವೆ. ನೂರಾರು ಜನ ಭಟ್ಟಿ ಸಾರಾಯಿ ಕುಡಿದವರನ್ನು ನಾವು ಇಂದು ನೋಡಿದ್ದೇವೆ ಇಂತಹ ಪರಿಸ್ಥಿತಿಯಾಗಬಾರದು ಹಣ ಕೊಡುವಂತಹವನಿಗೆ ತೃಪ್ತಿಯಾಗತಕ್ಕಂತಹ ರೀತಿಯಲ್ಲಿ ಇದನ್ನು ವ್ಯವಸ್ಥೆ ಮಾಡಬೇಕು. ಆದರಲ್ಲಿ ಅನುಭವವಿರ ತಕ್ಕಂತಹವರು ಮತ್ತು ವ್ಯವಸ್ಥಿತವಾಗಿ ಅದನ್ನು ತಯಾರು ಮಾಡತಕ್ಕಂತಹವರು ಯಾರಿದ್ದಾರೆ ಅವರೆಲ್ಲರನ್ನೂ ಸೇರಿಸಿ ಅದರಲ್ಲಿ ನಮ್ಮ ಸದನ ಸದಸ್ಯರನ್ನೂ ಒಳಗೊಂಡಂತಹ ಒಂದು ಸಮಿತಿಯನ್ನು ಮಾಡಬೇಕೆಂಬ ಸಲಹೆಯನ್ನು ಏನು ಕೊಟ್ಟಿದ್ದಾರೆ ಅದನ್ನು ನಿಜವಾಗಲೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಸರಕಾರ ಇದರ ಬಗ್ಗೆ ತೀವ್ರವಾದಂತಹ ಯೋಚನೆ ಮಾಡಿ ತಡ ಮಾಡದೇ ಆದಷ್ಟು ಜಾಗ್ರತೆಯಾಗಿ ಮಾಡಬೇಕೆಂದು ಈ ನಿರ್ಣಯವನ್ನು ಸರಕಾರ ಒಪ್ಪಿ ಜನರಿಗೆ ಆಗತಕ್ಕಂತಹ ತೊಂದರೆಯನ್ನು ನಿವಾರಣೆಯಾಗುವುದಕ್ಕೆ ಸರಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನಾನು ಕೂಡ ಅವರು ತಂದಿರುವ ನಿರ್ಣಯಕ್ಕೆ ಬೆಂಬಲ ಸೂಚಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಅಧ್ಯಕ್ಷರು.— ಸಭೆಯನ್ನು ಮುಂದೂಡುವುದಕ್ಕೆ ಮೊದಲು ನಾಳ್ಕನೆಯ ಅಧಿವೇಶನದಲ್ಲಿ ನಡೆಸಲಾದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ನಾನು ನೀಡಲಿಚ್ಚಿಸುತ್ತೇನೆ.

ದಿನಾಂಕ ೨೯ನೇ ಜನವರಿ, ೧೯೮೭ ರಂದು ಪ್ರಾರಂಭವಾದ ಸದನವು ೧೩–೨–೧೯೮೭ ರಂದು ಮುಂದೂಡಲ್ಪಟ್ಟು ಮತ್ತೆ ೨೭–೨–೧೯೮೭ ರಂದು ಪುನರ್ ಆರಂಭವಾಗಿ ಈ ದಿನದವರೆಗೆ ಒಟ್ಟು ೩೮ ದಿನಗಳ ಕಾಲ ಸಮಾವೇಶಗೊಂಡಿದ್ದು ಅನೇಕ ಮುಖ್ಯ ವಿಷಯಗಳನ್ನು ಚರ್ಚಿಸಿತು.

ದಿನಾಂಕ ೨೯ನೇ ಜನವರಿ, ೧೯೮೭ ರಂದು ವಿಧಾನ ಸಭೆಯ ಸಭಾಂಗಣದಲ್ಲಿ ಸಮಾವೇಶಗೊಂಡ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಿದರು. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಶ್ರೀ ಎಂ. ಪಿ. ಪ್ರಕಾಶ್‌ರವರು ಸೂಚಿಸಿದ ಹಾಗೂ ಶ್ರೀ. ಕೆ. ರಾಮಯ್ಯ ನವರು ಅನುಮೋದಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಸಭೆಯು ಆರು ದಿನಗಳ ಕಾಲ ಚರ್ಚೆ ನಡೆದು ೧೩ನೇ ಫೆಬ್ರುವರಿ, ೧೯೮೭ನೇ ದಿನಾಂಕದಂದು ವಂದನಾರ್ಪಣೆಯ ಪ್ರಸ್ತಾವನ್ನು ಅಂಗೀಕರಿಸಲಾಯಿತು.

೧೯೮೭–೮೮ನೇ ಸಾಲಿಗೆ ಸಂಬಂಧಿಸಿದಂತೆ ಆಯವ್ಯಯ ಅಂದಾಜುಗಳನ್ನು ದಿನಾಂಕ ೨೭ನೇ ಫೆಬ್ರುವರಿ, ೧೯೮೭ ರಂದು ಮಂಡಿಸಲಾಯಿತು. ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ ನಾಲ್ಕು ದಿನಗಳ ಕಾಲ ಹಾಗೂ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಹತ್ತು ದಿನಗಳ ಕಾಲ ನಡೆಯಿತು.

೧೯೮೬–೮೭ನೇ ಇಸವಿಯ ಅನುಪೂರಕ ಅಂದಾಜುಗಳನ್ನು (ಎರಡನೆಯ ಕಂತು) ಸಭೆಯಲ್ಲಿ ೧೯ನೇ ಮಾರ್ಚ್ ೧೯೮೭ನೇ ದಿನಾಂಕದಂದು ಮಂಡಿಸಲಾಯಿತು ಹಾಗೂ ಅವುಗಳಿಗೆ ಸದನದ ಒಪ್ಪಿಗೆ ಪಡೆಯಲಾಯಿತು.

ಈ ಅವಧಿಯಲ್ಲಿ ೨೧೨೮ ಚುಕ್ಕೆ ಗುರುತಿನ ಪ್ರಶ್ನೆಗಳು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ೬೭೦ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸಲು ೧೧೫೦ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪೈಕಿ ೧೧೫೦ ಪ್ರಶ್ನೆಗಳಿಗೆ ಸಭೆಯು ಮುಂದಿಡಲಾಯಿತು.

೫೩ ಅಲ್ಪಕಾಲಾವಧಿ ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ ೧೬ ಅಂಗೀಕರಿಸಿದ್ದು ಅವುಗಳೆಲ್ಲವುಗಳನ್ನು ಉತ್ತರಿಸಲಾಯಿತು.